ವಯಸ್ಕರ ಶಿಕ್ಷಣದ ಕೈಪಿಡಿ

ವಿದ್ಯೇವ ಕಲಿಸಯ್ಯ, ಹಿರಿಯರ ಕೂಡ

ಮೈಸೂರು :
ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ
೧೯೪೫

ವಯಸ್ಕರ ಶಿಕ್ಷಣದ ಪುಸ್ತಕಗಳು

ಅಕ್ಷರ ಕಲಿಯುವ ತರಗತಿ—ಕಾಲ : ಎರಡೂವರೆ ತಿಂಗಳು
ಅಕ್ಷರ ಕಲಿಯುವ ಪುಸ್ತಕ (ಭಾಗಗಳು ೧-೨) : ಬೆಲೆ ೦-

ಪುಸ್ತಕ ಓದುವ ತರಗತಿ—ಕಾಲ : ಮುಂದಕ್ಕೆ ಎರಡೂವರೆ ತಿಂಗ
ವಯಸ್ಕರ ಓದುವ ಪುಸ್ತಕ : ಬೆಲೆ ೦-

ವಿದ್ಯಾಮಂದಿರ—ಅಕ್ಷರಸ್ಥರಾದಮೇಲೆ ಮುಂದಿನ ವ್ಯಾಸಂಗಕ್ಕಾಗಿ
ವಯಸ್ಕರ ಶಿಕ್ಷಣದ ಪುಸ್ತಕಮಾಲೆ : ಪ್ರತಿಯೊಂದರ ಬೆಲೆ ೦-

ಮೂರು ಹಂತದಲ್ಲಿ ಕತೆಗಳು, ವಚನಗಳು, ಲಾವಣಿ, ಮೈಸೂ
ನೋಟಗಳು, ರಾಜ್ಯದ ರಚನೆ ಮೊದಲಾದ ಸುಲಭ ಪುಸ್ತಕಗಳು,
ಮತ್ತು
' ಬೆಳಕು ' ವಾರ ಪತ್ರಿಕೆ.

ಉಷಾ ಪ್ರೆಸ್, ನೀಲಗಿರಿ ರೋಡ್, ಮೈಸೂರು

ವಯಸ್ಕರ ವಿದ್ಯಾಭ್ಯಾಸದ ಆವಶ್ಯಕತೆ

ಅಕ್ಷರಜ್ಞಾನ-ತಿಳಿವಳಿಕೆ.—ವಯಸ್ಕರ ಶಿಕ್ಷಣದ ಆವಶ್ಯಕತೆಯ ವಿಷಯದಲ್ಲಿ ಯಾವ ದೇಶದಲ್ಲಿಯೂ ಭಿನ್ನಾಭಿಪ್ರಾಯಗಳಿಲ್ಲ. ಹೀಗಿರುವಾಗ ವಿದ್ಯೆಗೆ ತೌರುಮನೆಯಾದ ಈ ದೇಶದಲ್ಲಿ ವಯಸ್ಕರ ಶಿಕ್ಷಣ ತರಗತಿಗಳಿಗೆ ವಿರೋಧವೆಲ್ಲಿಯದು? ಅಷ್ಟೇ ಅಲ್ಲ. ಬಹುಕಾಲದಿಂದಲೂ ಈ ದೇಶದಲ್ಲಿ ಜನಸಾಮಾನ್ಯಕ್ಕೆ ತಿಳಿವಳಿಕೆ ಕೊಡಲು ಅನೇಕ ಏರ್ಪಾಡುಗಳು ಇವೆ. ಪುರಾಣಗಳನ್ನು ಬರೆದುದರ ಉದ್ದೇಶವೇ ಇದು. ಅಲ್ಲದೆ ದಾಸರಪದ, ಶಿವಶರಣರ ವಚನ ಇವೇ ಮೊದಲಾದುವು ಜನತೆಯ ಶಿಕ್ಷಣಕ್ಕೆ ಮುಖ್ಯ ಸಾಧನಗಳಾಗಿವೆ. ಆದರೆ ಆಗಿನ ಪ್ರಪಂಚದಲ್ಲಿ ಅಕ್ಷರಜ್ಞಾನ ಅಷ್ಟಾಗಿ ಅಗತ್ಯವಾಗಿರಲಿಲ್ಲ. ಅಚ್ಚಿನ ಯಂತ್ರ ಹುಟ್ಟಿದಮೇಲೆ, ಅಂಚೆಯ ಏರ್ಪಾಡುಗಳೇ ಮೊದಲಾದ ಸೌಕರ್ಯಗಳು ಬಂದಮೇಲೆ ಓದುಬರಹದ ತಿಳಿವಳಿಕೆ ಅಗತ್ಯವಾಯಿತು.

ಸಮಾಜದ ಏಳಿಗೆಗೆ, ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗೆ ತಳಹದಿಯಾಗಿರುವುದು ಶಿಕ್ಷಣ ಹೊಂದಿದ ತಿಳಿವಳಿಕೆಯುಳ್ಳ ಜನತೆ. ದಿನದಿನಕ್ಕೂ ಬೆಳೆಯುತ್ತಿರುವ ನಾನಾಮುಖವಾದ ಪ್ರಪಂಚದ ಜ್ಞಾನವನ್ನು ಮತ್ತೊಬ್ಬರಿಂದ ತಿಳಿಯುವುದು ದುಸ್ಸಾಧ್ಯವಾದ ಕೆಲಸ. ಪತ್ರಿಕೆ ಮತ್ತು ಪುಸ್ತಕಗಳ ಸಹಾಯದಿಂದ ಸಾಮಾಜಿಕನು ಈ ಜ್ಞಾನವನ್ನು ಪಡೆಯಬೇಕು. ಅದೂ ಅಲ್ಲದೆ, ಈ ದೇಶದಲ್ಲಿ, ಈಗತಾನೆ ಅನೇಕ ಸಾಮಾಜಿಕ ಮತ್ತು ಆರ್ಥಿಕ ಒಡಕುಗಳು ಇರುವುದನ್ನು ಮನಗಂಡು, ಅವುಗಳನ್ನು ನಿವಾರಣೆ ಮಾಡಿ ದೇಶದ ಕಲ್ಯಾಣವನ್ನು ಸಾಧಿಸಬೇಕೆಂದು ಉತ್ಸಾಹಿಗಳಾದ ದೇಶಸೇವಕರ ಜೊತೆಗೆ ಇದರಲ್ಲಿ ಸಹಾನುಭೂತಿಯುಳ್ಳ ಸರ್ಕಾರವೂ ಮುಂದೆ ಬರುತ್ತಲಿದೆ. ಈ ಕೆಲಸವು ಸಫಲವಾಗಬೇಕಾದರೆ ದೇಶದಲ್ಲಿ ಓದುಬರಹ ಬಲ್ಲವರ ಸಂಖ್ಯೆ ಹೆಚ್ಚಬೇಕು.

ಪ್ರಜಾಪ್ರಭುತ್ವ-ಅಕ್ಷರಜ್ಞಾನ.—ದೇಶದಲ್ಲಿ ಹೊಸದಾಗಿ ಕಂಡುಬಂದ ಚಳುವಳಿಗಳಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ ಒಂದಾಗಿದೆ. ಪ್ರಜೆಗಳ ಪ್ರತಿನಿಧಿಗಳು ದೇಶದ ಕೆಲಸಗಳನ್ನು ದಕ್ಷತೆಯಿಂದ ನಡಸಬೇಕಾದರೆ,

ಪ್ರತಿನಿಧಿಗಳಾಗಿ ಬರುವವರು ವಿದ್ಯಾವಂತರಾಗಿರಬೇಕು. ಅಲ್ಲದೆ
ಗಳನ್ನು ಆರಿಸುವವರು ಸುಶಿಕ್ಷಿತರಾದ ಮತ್ತು ಅಕ್ಷರಸ್ಥರಾದ ವಯಸ
ಬೇಕು. ಆಗತಾನೇ ಪ್ರಜಾಪ್ರತಿನಿಧಿಸಭೆಗಳು ತಮ್ಮ ಉದ್ದೇಶವನ್ನು
ಗೊಳಿಸಿ ಜನರಿಗೂ ಮತ್ತು ಸರ್ಕಾರಕ್ಕೂ ಸರಿಯಾದ ಸಂಬಂ
ಕಲ್ಪಿಸುತ್ತವೆ.

ಅಕ್ಷರಜ್ಞಾನ-ಬಲಾತ್ಕಾರ ವಿದ್ಯಾಭ್ಯಾಸ.—ಅಲ್ಲದೆ ದೇಶದ
ಬಲಾತ್ಕಾರ ವಿದ್ಯಾಭ್ಯಾಸವನ್ನು ತಕ್ಷಣವೇ ಜಾರಿಗೆ ತರಬೇಕೆಂಬ ಅಭಿ
ವಿದ್ಯಾವಂತರಾದ ತರುಣರಲ್ಲಿ ತೀವ್ರವಾಗಿ ಹುಟ್ಟಿದೆ. ಈ ಅಭಿಪ್ರಾ
ಅದಕ್ಕೆ ತಕ್ಕ ಯೋಜನೆಯೂ ದೇಶದ ಕಲ್ಯಾಣವನ್ನು ಸಾಧಿಸ
ಆದರೆ ತಂದೆ ತಾಯಿಗಳು ಅನಕ್ಷರಸ್ಥರಾಗಿದ್ದು ವಿದ್ಯಾಭ್ಯಾಸದ ಮಹತ್ತ
ಅರಿಯದೆ ಇದ್ದಾರೆ. ಹೀಗಿರುವಾಗ ಮಕ್ಕಳು ಸರಿಯಾಗಿ ಶಾಲೆಗಳಿಗೆ
ಇರುವುದು, ಮತ್ತು ವಿದ್ಯಾಭ್ಯಾಸದ ಮಧ್ಯದಲ್ಲಿಯೇ ಮಕ್ಕಳನ್ನು
ಗಳಿಂದ ಹಿಂದಕ್ಕೆ ತೆಗೆದುಕೊಳ್ಳುವುದು ಈ ರೀತಿಯ ತೊಡಕುಗಳು
ವಿದ್ಯಾಭ್ಯಾಸದ ಸದುದ್ದೇಶವು ಪೂರ್ಣವಾಗುವುದಿಲ್ಲ. ಆದುದರಿಂದ
ದಲ್ಲಿಯೇ ದೇಶದ ವಯಸ್ಕರಲ್ಲಿ ಅಕ್ಷರ ಪ್ರಚಾರವನ್ನು ಕೈಗೊಳ್ಳ
ಬಹಳ ಅತ್ಯಾವಶ್ಯಕ. ಎಂದರೆ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸ
ಯಾಗಬೇಕಾದರೆ ವಯಸ್ಕರ ವಿದ್ಯಾಭ್ಯಾಸ ಅತ್ಯಾವಶ್ಯಕ.

ಅಕ್ಷರಜ್ಞಾನ-ವ್ಯವಹಾರ.—ಸಮಾಜಕ್ಕೇ ಅಲ್ಲದೆ ವೈಯಕ್ತಿ
ವಯಸ್ಕರಿಗೆ ಅಕ್ಷರಜ್ಞಾನದಿಂದ ಬಹಳ ಲಾಭವುಂಟು. ತನ್ನ ವ್ಯ
ಲೇವಾದೇವಿ, ಕಾಗದಪತ್ರಗಳ ಬರವಣಿಗೆ ಮೊದಲಾದವುಗಳನ್ನು
ಮಾಡಿಕೊಳ್ಳಬಹುದು. ಆಗ ಇನ್ನೊಬ್ಬರ ಹಂಗಿಗೆ ಒಳಗಾಗಿ
ಹೋಗುವ ಅವಕಾಶಗಳು ಕಡಮೆಯಾಗುವುವು. ತನ್ನ ಹೆಚ್ಚಿನ
ರ್ಜನೆ, ದ್ರವ್ಯಾರ್ಜನೆಗಳಿಗೆ ಅಕ್ಷರಜ್ಞಾನವು ಸಹಾಯ ಮಾಡು
ಎಲ್ಲಕ್ಕಿಂತ ಮೇಲಾಗಿ ತಾನು ಅಕ್ಷರಸ್ಥ, ಸಮಾಜದಲ್ಲಿ ಗಣ್ಯಮನುಷ್ಯ
ವಳಿಕೆಯುಳ್ಳ ಪೌರ ಎಂಬ ಹೆಮ್ಮೆ ಮತ್ತು ಆತ್ಮವಿಶ್ವಾಸ ಇವುಗಳು
ಯಲ್ಲಿ ಬೆಳೆಯಲು ಸಹಕಾರಿಯಾಗುವುದು.

ಸಾಕ್ಷರತೆ ಎಂದರೇನು?

ವಯಸ್ಕರ ಸಾಕ್ಷರತೆಗೆ ಬೇಕಾಗುವ ಕಾಲದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಕೇವಲ ಎರಡು ವಾರಗಳಲ್ಲಿ ಇದು ಸಾಧ್ಯವೆಂದು ಕೆಲವರು ಸಾರಿರುತ್ತಾರೆ. ಈ ವೇಳೆಯಲ್ಲಿ ಇವರು ಕಲಿಸುವುದು, ಅಕ್ಷರಗಳನ್ನು ಮಾತ್ರ. ಇಷ್ಟು ಬೇಗ ಕಲಿತ ವಿದ್ಯೆ ಖಚಿತವಾಗಿ ನಿಲ್ಲದೆ, ಸಾಕ್ಷರತೆಯ ಯೋಜನೆಯನ್ನೇ ಕೆಲವು ಕಡೆ ನಗೆಗೆ ಈಡುಮಾಡಿದೆ. ಖಚಿತವಾದ ಅಕ್ಷರ ಜ್ಞಾನ ಹುಟ್ಟಿ ಓದುವುದು, ತಕ್ಕಮಟ್ಟಿಗೆ ಬರೆಯುವುದು, ಸಾಮಾನ್ಯ ಲೆಕ್ಕಾಚಾರ ಇವುಗಳನ್ನು ಕಲಿತು, ಅಕ್ಷರಸ್ಥನಾದಮೇಲೆ ಅವನು ಪುನಃ ನಿರಕ್ಷರತೆಗೆ ಜಾರದಿರಲು ತಕ್ಕ ಏರ್ಪಾಡನ್ನು ನಮ್ಮ ಯೋಜನೆಯಲ್ಲಿ ಮಾಡಿದೆ. ಆದುದರಿಂದಲೇ ಈ ಯೋಜನೆಗೆ, ವಾರಕ್ಕೆ ಆರು ದಿನಗಳಂತೆ ಕೆಲಸ ನಡಸಿದರೆ, ಐದು ತಿಂಗಳ ಕಾಲ ಅಗತ್ಯ. ಅಕ್ಷರಸ್ಥನೆನಿಸಿಕೊಳ್ಳುವವನಿಗೆ ಇರಬೇಕಾದ ಯೋಗ್ಯತೆಯನ್ನು ಈ ಕೆಳಗೆ ವಿವರಿಸಿದೆ:—

೧. ವೃತ್ತ ಪತ್ರಿಕೆಗಳಲ್ಲಿ ಬರುವ ಲೇಖನ, ವರ್ತಮಾನ, ನೋಟೀಸು, ಜಾಹೀರಾತು, ಪ್ರಕಟನೆ ಮೊದಲಾದುವನ್ನು ಓದಿ ಅರ್ಥಮಾಡಿಕೊಳ್ಳುವುದು;

೨. ಬಳಕೆಯಲ್ಲಿರುವ ತೂಕ, ಅಳತೆ ಮತ್ತು ನಾಣ್ಯಗಳ ವ್ಯವಹಾರದ ಸುಲಭ ಲೆಕ್ಕಾಚಾರವನ್ನು ೧ ರಿಂದ ೧೦, ೧೨ ಮತ್ತು ೧೬ ರ ಮಗ್ಗಿಯ ಉಪಯೋಗವನ್ನೂ ತಿಳಿದುಕೊಳ್ಳುವುದು;

೩. ತನ್ನ ಬಂಧುವಿಗೆ ಒಂದು ಕಾಗದವನ್ನೂ ಕಚೇರಿಗೆ ಒಂದು ಅರ್ಜಿಯನ್ನೂ ಬರೆಯುವ ಶಕ್ತಿಯನ್ನು ಪಡೆಯುವುದು;

೪. ತನ್ನ ದೇಶದ ಚರಿತ್ರೆ, ಭೂವಿವರಣೆ ಮತ್ತು ಅದರ ಮುಖ್ಯ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳ ಸಾಮಾನ್ಯ ತಿಳಿವಳಿಕೆಯನ್ನು ಸಂಪಾದಿಸುವುದು.

ಈ ವಿವರಣೆಯ ಆಧಾರದಮೇಲೆ ನಮ್ಮ ಯೋಜನೆಯ ಪಾಠಕ್ರಮಗಳನ್ನೂ ಪರೀಕ್ಷೆಗಳನ್ನೂ ಏರ್ಪಡಿಸಿದೆ.

ವಯಸ್ಕರ ಶಿಕ್ಷಣದ ವ್ಯವಸ್ಥೆ

ಓದು ಬರಹ ಬಾರದ ವಯಸ್ಕನನ್ನು ಅಕ್ಷರಸ್ಥನೆಂದು ಕರೆಯ
ದರೆ ಅವನು ಯಾವ ಯೋಗ್ಯತೆಯನ್ನು ಪಡೆದಿರಬೇಕೆಂದು ಹಿಂದೆ ತಿ
ನಮ್ಮ ದೇಶದ ಅನಕ್ಷರಸ್ಥರನ್ನು ಈ ಮಟ್ಟಕ್ಕೆ ತರಲು ಸಂಸ್ಥಾನದ
ತರಗತಿಗಳನ್ನು ತೆರೆದು, ಅಲ್ಪ ಕಾಲದಲ್ಲಿ, ಹೆಚ್ಚು ಹಣವನ್ನು ವೆಚ್ಚಮಾ
ಈ ಗುರಿಯನ್ನು ಸಾಧಿಸುವುದು ಆವಶ್ಯಕ. ಈ ತರಗತಿಗಳನ್ನು ನ
ಸ್ಥಳ, ಕಾಲ, ಇವುಗಳಿಗೆ ಆವಶ್ಯಕವಾದ ಸಲಕರಣೆಗಳು, ವೆಚ್ಚ ಈ ವಿ
ಗಳಲ್ಲಿ ಮುಖ್ಯ ಅಂಶಗಳನ್ನು ಇಲ್ಲಿ ತಿಳಿಸಿದೆ.

ಕಟ್ಟಡ.—ಈ ತರಗತಿಗಳಿಗಾಗಿ ಬೇರೆ ಕಟ್ಟಡಗಳನ್ನು ಕಟ್ಟಬೇ
ಆವಶ್ಯಕವಿಲ್ಲ. ಊರಿನಲ್ಲಿ ಪಾಠಶಾಲೆ ಇದ್ದರೆ ಅಲ್ಲಿಯೇ ತರಗತಿಗಳನ್ನು
ಬಹುದು. ರಾಮಮಂದಿರ, ಊರಚಾವಡಿ, ಗ್ರಾಮಪಂಚಾಯಿತಿ
ಅಂಜುಮನ್, ಮಸೀದಿ, ಗರಡಿಮನೆ—ಈ ಸ್ಥಳಗಳಲ್ಲಿ ಪಾಠ ನಡಸಬಹ
ಮುಖ್ಯವಾಗಿ ತರಗತಿಗಳಿಗೆ ಸೇರುವ ವಯಸ್ಕರ ಮನೆಗಳಿಗೆ ಹತ್ತಿ
ಬೇರೆಬೇರೆ ಕಡೆ ಆವಶ್ಯಕವಾದಷ್ಟು ತರಗತಿಗಳನ್ನು ತೆರೆಯಬೇಕು.

ವಿದ್ಯಾರ್ಥಿಗಳ ಸಂಖ್ಯೆ.—ಪ್ರತಿಯೊಬ್ಬ ವಿದ್ಯಾರ್ಥಿಗೂ ಸ
ವಾದಷ್ಟು ಗಮನಕೊಡುವುದು ಆವಶ್ಯಕವಾದುದರಿಂದ ಒಂದು ತರ
೧೨-೧೫ ಜನರು ಮಾತ್ರ ಇರಬೇಕು. ಪ್ರಾರಂಭದಲ್ಲಿ ಸೇರಿದ ಕೆಲವರು
ದಿನದ ಮೇಲೆ ನಿಂತುಹೋಗಬಹುದು. ಆದ್ದರಿಂದ ಸಾಮಾನ್ಯವಾಗಿ
ರಿಂದ ೨೫ ಜನರನ್ನು ಮೊದಲು ಸೇರಿಸಬಹುದು. ಆಗ ಕೊನೆಯ
ನಿಲ್ಲುವವರು ೧೦-೧೨ ಜನರಾದರೂ ಇರುವರು.

ತರಗತಿಗಳು.—ಓದುಬರಹವನ್ನು ಕಲಿಯಲು ಶಾಲೆಗೆ ಸೇರಿ
ವಯಸ್ಕರನ್ನು ಕರೆದಾಗ ಆರಂಭದಲ್ಲಿ ಮುಂದು ಬರುವವರಲ್ಲಿ ಹಿಂದೆ ಪ್ರ
ಮಿಕ ಶಾಲೆಗಳಲ್ಲಿ ಓದಿ ಈಗ ಮರೆತಿರುವವರೇ ಹೆಚ್ಚು ಮಂದಿ. ಅಲ್ಲಿ
ಒಂದೇ ಮಟ್ಟದ ಯೋಗ್ಯತೆಯುಳ್ಳ ಜನ ಬಂದು ಸೇರುವುದಿಲ್ಲ. ಅವರ
ಕೆಲವರು ಹುಟ್ಟಕ್ಷರಗಳನ್ನು ಜೋಡಿಸಿಕೊಂಡು ಓದಬಲ್ಲವರಾಗಿರು

ಇನ್ನು ಕೆಲವರು ಕಾಗುಣಿತವನ್ನು ಬಲ್ಲವರಿರಬಹುದು, ಮತ್ತೆ ಕೆಲವರಿಗೆ ಓದುವುದಕ್ಕೆ ಬರುತ್ತದೆ, ಬರೆಯುವುದಕ್ಕೆ ಬಾರದಿರಬಹುದು. ಆದರೆ ನಮ್ಮ ತರಗತಿಗೆ ಬೇಕಾದ ಜನ ಬಹುಮಟ್ಟಿಗೆ ಏನೂ ಅಕ್ಷರಜ್ಞಾನವಿಲ್ಲದವರು. ಇಂಥವರೊಂದಿಗೆ ಅಲ್ಪ ಸ್ವಲ್ಪ ಅಕ್ಷರಪರಿಚಯವುಳ್ಳವರನ್ನು ಸೇರಿಸಿಕೊಂಡರೆ, ಅವರ ಯೋಗ್ಯತೆಯ ಮಟ್ಟವನ್ನು ಗುರುತು ಮಾಡಿಕೊಂಡು, ಅಲ್ಲಿಂದ ಮುಂದಕ್ಕೆ ಅವರನ್ನು ತೆಗೆದುಕೊಂಡು ಹೋಗಬೇಕು. ಇಂಥವರೇ ೧೫-೨೦ ಜನ ಇದ್ದರೆ ಅವರಿಗೇ ಬೇರೆ ತರಗತಿ ಮಾಡಬೇಕು.

ಹಿಂದೆ ವಿವರಿಸಿದಂತೆ ಅಕ್ಷರಸ್ಥನೆಂದೆನಿಸಿಕೊಳ್ಳಬೇಕಾದರೆ ಹಿಡಿಯುವ ಕಾಲವನ್ನು ೨ ಭಾಗವಾಗಿ ಮಾಡಿದೆ. ಎರಡೂವರೆ ತಿಂಗಳಿನ ಅಕ್ಷರಪರಿಚಯ ತರಗತಿ; ಈ ಜ್ಞಾನವನ್ನು ದೃಢಪಡಿಸಲು ಮತ್ತೆ ಎರಡೂವರೆ ತಿಂಗಳ ಕಾಲದ ಪುಸ್ತಕ ಓದುವ ತರಗತಿ.

ಶಾಲೆಯ ಕಾಲ.—ಸಾಧಾರಣವಾಗಿ ಈ ತರಗತಿಗಳಿಗೆ ಸೇರುವ ವಯಸ್ಕರಿಗೆ ವಿರಾಮವಾಗುವುದು ಸಂಜೆ ಕಳೆದಮೇಲೆ. ರಾತ್ರಿ ೭-೩೦ ರಿಂದ ೯ ಗಂಟೆಯವರೆಗೆ ಈ ತರಗತಿಗಳನ್ನು ನಡೆಸಬೇಕು. ಸಂದರ್ಭಾನುಸಾರ ಇದನ್ನು ಸ್ವಲ್ಪ ಬದಲಾಯಿಸಿಕೊಳ್ಳಬಹುದು.

ತರಗತಿಯಲ್ಲಿ ಕಾರ್ಯಕ್ರಮ.—ಉಪಾಧ್ಯಾಯರು ಬರುವ ಹೊತ್ತಿಗೆ ವಿದ್ಯಾರ್ಥಿಗಳೆಲ್ಲರೂ ಹಾಜರಿದ್ದು, ಅವರು ಬಂದಕೂಡಲೆ ಎದ್ದು ನಿಂತು ನಮಸ್ಕಾರ ಮಾಡುತ್ತಾರೆ ಎಂದು ನಿರೀಕ್ಷಿಸಕೂಡದು. ಅನೇಕ ವೇಳೆ ಉಪಾಧ್ಯಾಯರು ಬಂದಮೇಲೆ ವಿದ್ಯಾರ್ಥಿಗಳು ಸೇರುವರು. ಅವರು ಒಬ್ಬೊಬ್ಬರಾಗಿ ಬಂದು ಸೇರುತ್ತಾರೆ. ಎಲ್ಲರೂ ಸೇರುವವರೆಗೆ ಉಪಾಧ್ಯಾಯರು ಅವರಿಗೆ ದಿನದ ಸುದ್ದಿಯನ್ನು ತಿಳಿಸುವುದು, ಅವರ ಕ್ಷೇಮಸಮಾಚಾರವನ್ನು ವಿಚಾರಿಸುವುದು, ಪತ್ರಿಕೆಯನ್ನು ಓದಿ ಹೇಳುವುದು, ಇಂಥ ಕಾರ್ಯಗಳಲ್ಲಿ ನಿರತರಾಗಿರಬೇಕು. ಇದಕ್ಕೆ ಸುಮಾರು ಅರ್ಧ ಗಂಟೆ ಕಾಲ. ಮುಂದೆ ಆ ದಿನದ ಪಾಠಕ್ಕೆ ಒಂದು ಗಂಟೆಯ ಕಾಲ.

ರಜಾ ದಿನಗಳು.—ಈ ತರಗತಿಗಳನ್ನು ನಡೆಸುವಾಗ ಸರ್ಕಾರಿ ರಜಾ ದಿನಗಳನ್ನು ಅನುಸರಿಸುವುದು ಸರಿಯಲ್ಲ. ಊರಿನ ಜನರು ಹಬ್ಬ, ಪೂಜೆ

ಈ ಯಾವುದಾದರೂ ಕಾರಣಗಳಿಂದ ರಾತ್ರಿಯ ವೇಳೆ ಬರಲು ಅ
ವಾಗದಿದ್ದರೆ, ಆ ದಿನ ರಜಾ ಕೊಡಬೇಕು; ಅಲ್ಲದೆ ವಾರಕ್ಕೊಂ
ರಜ—ಶನಿವಾರ, ಸೋಮವಾರ ಅಥವಾ ಶುಕ್ರವಾರ.

ಶಾಲೆಯ ಸಲಕರಣೆಗಳು.—ದೀಪ, ಕಪ್ಪುಹಲಗೆ, ಸೀಮೆ
ರಿಜಿಸ್ಟರು—ಇವು ಆವಶ್ಯಕವಾದ ಸಲಕರಣೆಗಳು. ಅನೇಕ ಪಾಠಶಾ
ದೀಪದ ಅನುಕೂಲವಿರುವುದಿಲ್ಲ. ತರಗತಿಗಳನ್ನು ಅಲ್ಲಿ ನಡಸಬೆ
ದೀಪಕ್ಕೆ ಪ್ರತ್ಯೇಕವಾದ ಏರ್ಪಾಡು ಮಾಡಬೇಕು. ಭಜನೆಮನೆ,
ಮಂದಿರ ಇಂಥ ಜಾಗಗಳಲ್ಲಿ ಸಾಮಾನ್ಯವಾಗಿ ದೀಪವಿರುತ್ತದೆ.
ಸ್ವಲ್ಪ ಉತ್ತಮಪಡಿಸಿಕೊಂಡು ಉಪಯೋಗಿಸಬಹುದು. ಪಾಠಶಾ
ತರಗತಿಗಳನ್ನು ನಡಸುವವರು ಅಲ್ಲಿರುವ ಕಪ್ಪು ಹಲಗೆಯನ್ನೇ ಉ
ಗಿಸಿಕೊಳ್ಳಬಹುದು. ಇತರ ಕಡೆಗಳಲ್ಲಿ ಪಾಠ ನಡಸುವವರು ಒಂದು
ನ್ಯವಾದ ಹಲಗೆಗೆ ಕಪ್ಪು ಬಣ್ಣವನ್ನೋ, ಉಮ್ಮತ್ತಿಕಾಯಿ ಇದ್ದಲ
ಯನ್ನೋ ಬಳಿದು ಅಗ್ಗವಾದ ಕಪ್ಪು ಹಲಗೆಯನ್ನು ಮಾಡಿಕೊಳ್ಳಬ
ವಿದ್ಯಾರ್ಥಿಗಳ ಹಾಜರಿಯನ್ನೂ ಕಾಲಕಾಲಕ್ಕೆ ಅವರು ಪಾಠದಲ್ಲಿ
ವರಿದ ಮಟ್ಟವನ್ನೂ ಗುರುತುಮಾಡಲು ಒಂದು ಪುಸ್ತಕ ಇರಬೇಕು.

ವಿದ್ಯಾರ್ಥಿಗಳ ಸಲಕರಣೆಗಳು.—ಪ್ರತಿಯೊಬ್ಬ ವಿ
ಯಲ್ಲಿಯೂ ಪಾಠದ ಪುಸ್ತಕಗಳು, ಸ್ಲೇಟು, ಬಳಪ ಇರಬೇಕು. ಮನೆ
ಬಹುದಾದ ಹುಡುಗರ ಸ್ಲೇಟು ಬಳಪಗಳನ್ನೇ ಉಪಯೋಗಿಸಿದರೆ
ವೆಚ್ಚ ಕಮ್ಮಿಯಾಗುತ್ತದೆ. ಆದರೆ ಪುಸ್ತಕಗಳಲ್ಲಿಯೇ ಬರೆದರೆ ಅವ
ವಣಿಗೆಯಲ್ಲಿ ಮುಂದುವರಿಯುವದನ್ನೂ ಪರೀಕ್ಷಿಸಲು ಅನುಕೂಲವಾಗ
ಅಲ್ಲದೆ ಮುಂದೆ ವ್ಯವಹಾರದಲ್ಲಿ ಕಾಗದವನ್ನೇ ಉಪಯೋಗಿಸುವ
ಆದಕ್ಕೆ ತಕ್ಕ ಅಭ್ಯಾಸ ಬರುತ್ತದೆ.

ಪಠ್ಯಪುಸ್ತಕಗಳು.—ವಯಸ್ಕರಿಗಾಗಿಯೇ ಬರೆದ ಪಠ್ಯ
ಗಳನ್ನು ಉಪಯೋಗಿಸುವುದು ಆವಶ್ಯಕ. ಅಕ್ಷರ ಕಲಿಯುವ ಮಕ
ವಯಸ್ಕರಿಗೂ ಅಕ್ಷರಜ್ಞಾನದಲ್ಲಿ ವ್ಯತ್ಯಾಸವಿಲ್ಲದಿದ್ದರೂ, ಅವರುಗ
ಭವ ತಿಳಿವಳಿಕೆಗಳಲ್ಲಿ ಬಹಳ ಅಂತರವಿದೆ. ಇದನ್ನರಿತು ವಯಸ್ಕರಿ

ಬರಹದಲ್ಲಿ ಆಸಕ್ತಿ ಹುಟ್ಟಿಸುವಂಥ ಪಾಠಗಳುಳ್ಳ ಪುಸ್ತಕಗಳನ್ನು ಉಪಯೋಗಿಸಬೇಕು.

ಪರೀಕ್ಷೆಗಳು.—ಪಠ್ಯಪುಸ್ತಕಗಳನ್ನು ಓದಿ ಮುಗಿಸಿದ ಮೇಲೆ ವಿದ್ಯಾರ್ಥಿಗಳನ್ನು ಪರೀಕ್ಷಿಸಬೇಕು. ಪರೀಕ್ಷೆಯ ಮಟ್ಟವು ಎಲ್ಲ ಕೇಂದ್ರಗಳಲ್ಲಿಯೂ ಒಂದೇ ಇರಲು ತಕ್ಕ ಏರ್ಪಾಡು ಮಾಡುವದು ಆವಶ್ಯಕ. ಅಲ್ಲದೆ ಎರಡನೆಯ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಯೋಗ್ಯತಾಪತ್ರಗಳನ್ನು ಕೊಡಬೇಕು.

ಉಪಾಧ್ಯಾಯರು.—ಈ ತರಗತಿಗಳಲ್ಲಿ ಸಾಮಾನ್ಯ ಯೋಗ್ಯತೆಯುಳ್ಳ ಯಾವ ವಿದ್ಯಾವಂತರಾದರೂ ಪಾಠಹೇಳಬಹುದು. ಆದರೆ ಅವರು ಪಾಠ ಹೇಳುವ ಕ್ರಮದಲ್ಲಿ ಶಿಕ್ಷಣ ಪಡೆಯುವದು ಆವಶ್ಯಕ. ಬೇರೆ ಬೇರೆ ಜಾಗಗಳಲ್ಲಿ ಉಪಾಧ್ಯಾಯರಿಗೆ ಶಿಕ್ಷಣ ಕೊಡುವ ಏರ್ಪಾಡನ್ನು ಸಂಸ್ಥಾನದ ಅಕ್ಷರಪ್ರಚಾರ ಸಮಿತಿಯವರು ಮಾಡಿರುತ್ತಾರೆ. ಪ್ರತಿಫಲಾಪೇಕ್ಷೆಯಿಲ್ಲದೆಯೇ ಈ ತರಗತಿಗಳನ್ನು ನಡಸಲು ವಿದ್ಯಾವಂತರು ಮುಂದೆ ಬರುವರೆಂದು ನಮ್ಮ ನಂಬಿಕೆ. ಆದರೆ ದ್ರವ್ಯಾನುಕೂಲವಿದ್ದ ಕಡೆ ಉಪಾಧ್ಯಾಯರಿಗೆ ಸಂಭಾವನೆ ಕೊಡಬಹುದು. ಹಾಗೆ ಮಾಡುವಾಗ ತರಗತಿಯಲ್ಲಿ ಪಾಠ ನಡಸಿದ ಮೇಲೆ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಪ್ರತಿಮಟ್ಟದ ತರಗತಿಯಲ್ಲೂ ತೇರ್ಗಡೆಯಾದ ವಿದ್ಯಾರ್ಥಿಗಳ ಸಂಖ್ಯೆಯಮೇರೆ ಸಂಭಾವನೆ ಕೊಡುವುದು ಒಳ್ಳೆಯದು.

ಸಮಾರಂಭ, ಉತ್ಸವ, ಭೇಟಿ, ಇತ್ಯಾದಿ.—ವಯಸ್ಕರ ಶಾಲೆಯ ವಿದ್ಯಾರ್ಥಿಗಳಲ್ಲಿ ಓದುಬರಹವನ್ನು ಕಲಿಯಲು ಉತ್ಸಾಹ ಆರಂಭದಲ್ಲಿದ್ದಂತೆ ಕೊನೆಯವರೆಗೂ ಏಕರೀತಿಯಾಗಿರುವುದೆಂದು ನಿರೀಕ್ಷಿಸುವುದು ತಪ್ಪು. ಆದರೆ ಆ ಉತ್ಸಾಹವನ್ನು ಕಾಪಾಡಿಕೊಂಡು ಬರುವುದು ಅಗತ್ಯ. ಇದನ್ನು ಸಾಧಿಸಬೇಕಾದರೆ ಈ ತರಗತಿಗಳು ಬರಿಯ ಅಕ್ಷರಾಭ್ಯಾಸದ ತರಗತಿಗಳಾಗಬಾರದು. ಸುದ್ದಿ ಸಮಾಚಾರಗಳನ್ನು ತಿಳಿದುಕೊಳ್ಳಲು, ಪುರಾಣ ಪುಣ್ಯಕಥೆಗಳನ್ನು ಕೇಳಲು, ಭಾರತವಾಚನ, ಹರಿಕಥೆ, ಭಜನೆ, ಸಂಗೀತ–ಇವುಗಳನ್ನು ಕೇಳಲು ಜನರು ಬಹಳ ಉತ್ಸುಕರಾಗಿರುತ್ತಾರೆ. ಉಪಾಧ್ಯಾಯರು ಇವುಗಳಿಗೆ ಆಗಾಗ್ಗೆ ಅವಕಾಶ ಕೊಡಬೇಕು. ಅಲ್ಲದೆ

ಗಣ್ಯರಾದ ದೊಡ್ಡ ಮನುಷ್ಯರನ್ನು ಶಾಲೆಗೆ ಕರೆದುಕೊಂಡು ತೋರಿಸಬೇಕು. ಅವರು ಒಂದು ಎರಡು ಒಳ್ಳೆಯ ಮಾತನಾಡಿ ವಿದ್ಯಾ ಬೆನ್ನು ತಟ್ಟಿದರೆ ಅವರಿಗೆ ಬಹಳ ಪ್ರೋತ್ಸಾಹ ಕೊಟ್ಟಂತಾಗ ವ್ಯಾಸಂಗದ ಕೊನೆಯಲ್ಲಿ ಯೋಗ್ಯತಾಪತ್ರಗಳನ್ನು ಹಂಚಲು ಉತ್ಸವವನ್ನು ನಡಿಸಿ ಯಾರಾದರೂ ಗಣ್ಯ ಮಹನೀಯರಿಂದ ಯೋ ಪತ್ರಗಳನ್ನು ಕೊಡಿಸಬೇಕು.

ವೆಚ್ಚ.—ಹದಿನೈದು ಜನ ವಿದ್ಯಾರ್ಥಿಗಳಿರುವ ಒಂದು ತ ವೆಚ್ಚವನ್ನು ಈ ರೀತಿ ಅಂದಾಜು ಮಾಡಿದೆ:—

	ರೂ.
೧. ಪಠ್ಯಪುಸ್ತಕಗಳು ಮತ್ತು ತರಗತಿಯ ಇತರ ಸಾಮಗ್ರಿಗಳು	೧೫—
೨. ಉಪಾಧ್ಯಾಯರಿಗೆ—ತೇರ್ಗಡೆಯಾದ ವಿದ್ಯಾರ್ಥಿಗೆ ತಲಾ ರೂ. ೨ ನಂತೆ	೩೦—
೩. ದೀಪದ ಖರ್ಚು ಮತ್ತು ಸಾದಿಲ್ವಾರು	೭—
ಒಟ್ಟು	೫೨—

ಉಪಸಂಹಾರ.—ಹೀಗೆ ಹೆಚ್ಚು ಹಣವನ್ನು ವೆಚ್ಚಮಾಡದ ಕಾಲದಲ್ಲಿಯೇ ಓದುಬರಹ ಬಾರದ ನಮ್ಮ ಬಡಜನರನ್ನು ಅಕ್ಷರಸ್ಥ ಮಾಡುವುದು ಸಾಧ್ಯ. ಇದಕ್ಕೆ ಬೇಕಾದುದು ಮುಖ್ಯವಾಗಿ ವಿದ್ಯಾ ಬೆಂಬಲ ಮತ್ತು ಉತ್ಸಾಹ. ಆದರಲ್ಲಿಯೂ ಉಪಾಧ್ಯಾಯ ವೃತ್ತಿ ಅವಲಂಬಿಸಿರುವವರು ಮುಂದೆ ಬಂದು ಈ ಕೆಲಸಕ್ಕೆ ನಿಲ್ಲಬೇಕಲ್ಲವೆ? ವಂತರಾದವರು ತಮ್ಮ ದೇಶದ ಜನಕ್ಕೆ ತಾವು ತೆರಬೇಕಾದ ಸಾಲ ತಮ್ಮ ಋಷಿ ಋಣ; ಏಕೆಂದರೆ ಜನರ ಹಣದ ವೆಚ್ಚದಿಂದಲೇ ಅಲ್ಲವೇ ವಿದ್ಯಾವಂತರಾಗಿರುವುದು?

ದೊಡ್ಡವರಿಗೆ ಪಾಠ ಹೇಳುವುದು

ಪಾಠ ಕಲಿಯುವ ವಿದ್ಯಾರ್ಥಿಗಳು ಸಾಮಾನ್ಯ ಶಾಲೆಗಳಲ್ಲಿ ಉಪಾಧ್ಯಾಯರಿಗಿಂತ ವಯಸ್ಸಿನಲ್ಲಿ ಬಹಳ ಚಿಕ್ಕವರು. ಅಲ್ಲದೆ, ವಯಸ್ಸಿನಲ್ಲಿರುವಂತೆ ಅನುಭವದಲ್ಲಿಯೂ, ತಿಳಿವಳಿಕೆಯಲ್ಲಿಯೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಅಂತರವಿರುತ್ತದೆ. ಆದುದರಿಂದ ವಿದ್ಯಾರ್ಥಿಗಳಿಗೆ ಉಪಾಧ್ಯಾಯರಲ್ಲಿ ಗೌರವ ಸಹಜವಾಗಿ ಹುಟ್ಟುವುದು ಆದರೂ "**ಮಗುವನ್ನು ಗೌರವಿಸು**" (Respect the Child) ಎಂದು ಉಪಾಧ್ಯಾಯನಿಗೆ ಶಿಕ್ಷಣಶಾಸ್ತ್ರ ಒತ್ತಿ ಒತ್ತಿ ಹೇಳುತ್ತದೆ. ವಿದ್ಯಾಭ್ಯಾಸ ಕ್ರಮದಲ್ಲಿ ಹಳೆಯ ಸಂಪ್ರದಾಯಕ್ಕೂ ಹೊಸ ಸಂಪ್ರದಾಯಕ್ಕೂ ಇರುವ ಮುಖ್ಯ ವ್ಯತ್ಯಾಸದ ತತ್ವ ಈ ಒಂದು ವಾಕ್ಯದಲ್ಲಿ ಅಡಗಿದೆ; ಶಿಕ್ಷಣಶಾಸ್ತ್ರ ಅಥವಾ ಶಿಕ್ಷಣಕಲೆಯ ಗುಟ್ಟು ಇದು. ಹೀಗಿರುವಾಗ ವಿದ್ಯಾರ್ಥಿಯಾದ ಮಗುವನ್ನು ಉಪಾಧ್ಯಾಯನು ಗೌರವದಿಂದ ಕಾಣಬೇಕೆಂದಮೇಲೆ ವಿದ್ಯಾರ್ಥಿಗಳಾಗಿರುವ ವಯಸ್ಕರನ್ನೂ ಗೌರವದಿಂದ ಕಾಣಬೇಕೆಂದು ಬೇರೆ ಹೇಳಬೇಕಾಗಿಲ್ಲ. ಇದಕ್ಕೆ ಅನೇಕ ಕಾರಣಗಳುಂಟು.

ಬೋಧಿಸುವುದಕ್ಕೂ, ಕಲಿಯುವುದಕ್ಕೂ ಬಹಳ ಅಂತರವಿದೆಯೆಂದು ಅನುಭವಶಾಲಿಗಳಾದ ಉಪಾಧ್ಯಾಯರೆಲ್ಲರೂ ಬಲ್ಲರು. ಹೇಗೆಂದರೆ ದಾನವನ್ನು ಸ್ವೀಕಾರ ಮಾಡಿದಮೇಲೆ ದಾನಕೊಟ್ಟೆ ಎಂದು ಹೇಳುವುದು ನ್ಯಾಯ; ಹಾಗೆಯೇ ಬೋಧಿಸಿದ ವಿಷಯವನ್ನು ವಿದ್ಯಾರ್ಥಿ ಕಲಿತ ಮೇಲೆಯೇ ಅದನ್ನು ಬೋಧಿಸಿದೆ ಎಂದು ಉಪಾಧ್ಯಾಯರು ಹೇಳಿಕೊಳ್ಳಬಹುದು. ಪಾಠ ಹೇಳುವುದರಲ್ಲಿ ಉಪಾಧ್ಯಾಯರು ಗಟ್ಟಿಯಾಗಿ ಕಿರಿಚಿ (ವಿದ್ಯಾರ್ಥಿಗಳು ದಡ್ಡರು, ಕಲಿಯಲಿಲ್ಲ ಎಂದು ಕೋಪಗೊಂಡು) ಉದ್ವೇಗದಿಂದ ಮಾತನಾಡಿದರೆ ಅವರಿಗೆ ವೃಥಾ ದೇಹಶ್ರಮವಾಗುವುದು. ಜೊತೆಗೆ ಮನಃಕ್ಲೇಶವನ್ನೂ ಮಾಡಿಕೊಂಡು ಬಳಲಬೇಕಾಗುವುದು. ಹಿಂದೆ ಒಬ್ಬ ಉಪಾಧ್ಯಾಯರು ಒಂದು ತರಗತಿಯ ಪಾಠ ಮುಗಿಸಿಕೊಂಡು ಹೊರಗೆ ಬಂದಾಗ "ಮೆಷ್ಟರೇನೋ ಪಾಠ ಚೆನ್ನಾಗಿ ಹೇಳುತ್ತಾರೆ. ಆದರೆ ನನ್ನ ತಲೆಗೆ ಅದು ಹತ್ತುವುದಿಲ್ಲ" ಎಂದು ತಮ್ಮ ವಿದ್ಯಾರ್ಥಿಯೊಬ್ಬನು ಗೊಣಗುಟ್ಟಿಕೊಂಡನು. ಆ ವಿದ್ಯಾರ್ಥಿ

ಬಹಳ ಭಯಸ್ಥನಾಗಿದ್ದಿರಬೇಕು. ಅಂದರೆ ಉಪಾಧ್ಯಾಯರ ಬೆ ನಿರರ್ಥಕ ಎಂದು ಹೇಳಿದಂತಾಯಿತು. ಆದುದರಿಂದ ನಮ್ಮ ಬೆ ಸಾರ್ಥಕವಾಗಬೇಕಾದರೆ ವಿದ್ಯಾರ್ಥಿಯ 'ಮರ್ಜಿ' ಯನ್ನು ಹಿಡಿದು ಹೇಳಬೇಕು. ಅವನ ಮನಸ್ಸು ಓಡುವ ರೀತಿಯನ್ನು ತಿಳಿಯ ಅವನಿಗೆ ಈಗಾಗಲೇ ತಿಳಿದಿರುವ ವಿಷಯಗಳಿಗೆ ಹೊಸ ವಿಷಯ ಜೋಡಿಸಿ ತಿಳಿಸಬೇಕು. ಇದಕ್ಕೆ ಉಪಾಧ್ಯಾಯನಿಗೆ ಸಮಾಧಾನಬೆ ವಿದ್ಯಾರ್ಥಿಯನ್ನು ಮೊದಲು ತಿಳಿಯಬೇಕು. ಏನು ಮಾತನಾಡುವಾ ಕೂಡ, ಮಾತಿನ ಅರ್ಥ ಕೇಳುವವನದು, ಅರ್ಥ ಮಾತ್ರ ಆಡುವ ಎಂಬುದನ್ನು ನೆನಪಿನಲ್ಲಿಡಬೇಕು. ಈ ತತ್ವವನ್ನು ಉಪಾಧ್ಯಾ ಚೆನ್ನಾಗಿ ಮನದಟ್ಟು ಮಾಡಿಕೊಂಡು ತನ್ನ ವ್ಯವಹಾರದಲ್ಲಿ ಅನು ಬೇಕು. ಪಾಠ ಬೋಧನೆಗೆ ಇಷ್ಟು ಪೂರ್ವಸಿದ್ಧತೆ ಬೇಕಾದರೆ ವಿದ ಯಲ್ಲಿ ಉಪಾಧ್ಯಾಯನಿಗೆ ಗೌರವವಿಲ್ಲದಿದ್ದರೆ ಸಾಧ್ಯವೇ ?

ಅಷ್ಟೇ ಅಲ್ಲ. ವಯಸ್ಕರ ಶಾಲೆಯ ವಿದ್ಯಾರ್ಥಿಗಳು ಉಪಾಧ ನಷ್ಟೇ, ಬಹುಶಃ ಅವನಿಗಿಂತಲೂ ಹೆಚ್ಚಾಗಿ, ತಿಳಿವಳಿಕೆಯುಳ್ಳವರು, ಭವಶಾಲಿಗಳು, ವಯಸ್ಸಿನಲ್ಲಿ ಹಿರಿಯರು. ಆದುದರಿಂದ ಅವರನ್ನು ಗೌ ದಿಂದ ಕಾಣಬೇಡವೇ ?

ಮೂರನೆಯದಾಗಿ, ವಯಸ್ಕರಾದ ವಿದ್ಯಾರ್ಥಿಗಳಲ್ಲಿ ಉಪಾಧ ರಿಗೆ ಸಹಾನುಭೂತಿ ಇರಬೇಕು. ಬಹುಶಃ ನಮ್ಮ ಪೂರ್ವಿಕರು ವಯಸ ಓದುಬರಹವನ್ನು ಕಲಿಸಬೇಕಾದ ಅಗತ್ಯವನ್ನು ಕಾಣಲಿಲ್ಲ ; ಆ ಕಾ ಅದು ಅಷ್ಟಾಗಿ ಬೇಕಿರಲಿಲ್ಲ. ಆದ್ದರಿಂದ ಸಾಮಾನ್ಯಜನ ಅಕ್ಷರಜ್ಞಾನ ಪಡೆಯಲು ಆಗ ಹೆಚ್ಚಿನ ಅವಕಾಶಗಳಿರಲಿಲ್ಲ. ಉಪಾಧ್ಯಾಯನಾಗಿರುವ ಅದೃಷ್ಟವಶಾತ್ ಆ ಸುಯೋಗ ಈಗ ದೊರೆತಿದೆ. ಆದುದರಿಂದ ಖಾ ಯಿಂದ ನರಳುತ್ತಿರುವ ರೋಗಿಯ ವಿಷಯದಲ್ಲಿ ಆತನು ಹೇಗೆ ಸಹ ಭೂತಿಯಿಂದ ನಡೆದುಕೊಳ್ಳಬೇಕೋ ಹಾಗೆಯೇ ವಯಸ್ಕ ವಿದ್ಯಾರ್ಥಿ ನಡೆದುಕೊಂಡು ಅವರಿಗೆ ಅಕ್ಷರಜ್ಞಾನವನ್ನುಂಟುಮಾಡಿಕೊಡಬೇಕು.

ವಿದ್ಯಾರ್ಥಿಗಳನ್ನು ಪ್ರಸನ್ನರಾಗಿ ಮಾಡಿಕೊಳ್ಳುವುದು ಉಪಾ ಯನ ಒಂದು ಕುಶಲತೆ. ಮಕ್ಕಳಲ್ಲಿ ಇದು ಸುಲಭ. ಏಕೆಂದರೆ, ತ

ೋವುಂಟುಮಾಡಿದ ಪ್ರಸಂಗಗಳಿಗೂ ವ್ಯಕ್ತಿಗಳಿಗೂ ಅವರಿಗೆ ನೆನಪು ಡಮೆ. ತಂದೆಯ ಕೈಯಲ್ಲಿ ಈ ಕ್ಷಣ ಏಟುತಿಂದ ಮಗುವು ಮರುಕ್ಷಣ ದನ್ನು ಮರೆತು ಆತನೊಂದಿಗೆ ಆಟವಾಡುತ್ತಿರುತ್ತದೆ. ವಯಸ್ಕರಿಗೆ ಈ ಕ್ತಿಯಿಲ್ಲ. ಉಪಾಧ್ಯಾಯನ ಒಂದು ಕಠಿಣ ಮಾತು, ವಕ್ರನೋಟ ಅಥವಾ ಜುಗುಪ್ಸೆ ತೋರುವ ಮುಖ ಇವುಗಳನ್ನು ಎಂದಿಗೂ ಅವರು ಮರೆಯ ಾರರು. ಪಾಠ ಕಲಿಯುವಾಗ ವಿದ್ಯಾರ್ಥಿಯ ಮನಸ್ಸು ಪ್ರಸನ್ನವಾಗಿಲ್ಲ ದ್ದರೆ ಕಲಿಯುವುದು ಬಹಳ ಕಷ್ಟ. ಆದ್ದರಿಂದ ವಿದ್ಯಾರ್ಥಿಗಳು ಹಸನ್ಮುಖ ಾಗಿ ಸಂತೋಷ ಚಿತ್ತರಾಗಿ ಇರಬೇಕಾದರೆ ಉಪಾಧ್ಯಾಯರಲ್ಲಿ ಮೊದಲು ಆ ುಣಗಳಿರಬೇಕು. ಅಷ್ಟೇ ಸಾಲದು; ತರಗತಿಯಲ್ಲಿ ಅವು ಎದ್ದು ತೋರ ಬೇಕು. ಆದರೆ ಉಪಾಧ್ಯಾಯರುಗಳಿಗೆ ತರಗತಿಗಳಲ್ಲಿ ಸಿಟ್ಟು ಬರುವ ್ರಸಂಗವೇ ಒದಗುವುದಿಲ್ಲ ಎಂದು ಹೇಳಲಾಗುವುದಿಲ್ಲ. ಅಂಥ ಸಂದರ್ಭದಲ್ಲಿ ಕೋಪವನ್ನು ವ್ಯಕ್ತಪಡಿಸದೆ, ತಾಳ್ಮೆ ತಂದುಕೊಂಡು ಕೆಲಸ ನಡೆಸಬೇಕು. ಕೋಪಗೊಳ್ಳುವುದರ ಬದಲು ವ್ಯಂಗ್ಯವಾಗಿ ಮಾತನಾಡಿ ವಿದ್ಯಾರ್ಥಿಗಳನ್ನು ಹಾಸ್ಯ ಮಾಡುವುದುಂಟು. ಇಂಥ ಮಾತು ದೇಹಶಿಕ್ಷೆಗಿಂತ ಹೆಚ್ಚು ನೋವ ನ್ನುಂಟುಮಾಡುವುದು. ಆದ್ದರಿಂದ ಈ ನಡವಳಿಕೆ ವಯಸ್ಕರ ಶಾಲೆಯ ಉಪಾಧ್ಯಾಯರಿಗೆ ಸರ್ವಥಾ ವರ್ಜ್ಯ.

ಸಾಮಾನ್ಯವಾಗಿ ವಿದ್ಯಾರ್ಥಿಗಳನ್ನು ಬಹುವಚನದಲ್ಲಿ ಸಂಬೋಧಿಸು ವುದು ಉತ್ತಮ. ಗ್ರಾಮಾಂತರದಲ್ಲಿ ಉಪಾಧ್ಯಾಯರಿಗೂ ಜನರಿಗೂ ಪ್ರೀತಿ ವಿಶ್ವಾಸಗಳು ಬೆಳೆದು ಉಪಾಧ್ಯಾಯರು ಸಲಿಗೆಯಿಂದ ಮಾತನಾಡಿಸುವುದು ಜನರಲ್ಲಿ ಅವರಿಗೆ ಇರುವ ಪ್ರೀತಿಯ ಕುರುಹು ಎಂದು ಕಂಡುಬಂದಾಗ ಏಕ ವಚನದಲ್ಲಿ ಸಂಬೋಧಿಸಿದರೆ ತಪ್ಪಿಲ್ಲ. ತರಗತಿಯಲ್ಲಿ ಉಪಾಧ್ಯಾಯರು ಕುರ್ಚಿಯ ಮೇಲೆ ಕೂತು, ವಿದ್ಯಾರ್ಥಿಗಳನ್ನು ನೆಲದಮೇಲೆಯೋ, ಚಾಪೆಯ ಮೇಲೆಯೋ ಕೂಡಿಸುವುದು ಸರ್ವಥಾ ಸರಿಯಲ್ಲ. ಉಪಾಧ್ಯಾಯರು ತಮ್ಮ ಶಿಷ್ಯರೊಂದಿಗೆ ನೆಲದ ಮೇಲೆಯೇ ಕೂಡಬೇಕು.

ಅಷ್ಟೇ ಅಲ್ಲ; ವಯಸ್ಕರ ಶಾಲೆ ಆರಂಭಿಸುವುದೇ ತಡ, ಓದುಬರಹ ಕಲಿಯಬೇಕೆಂದು, ತಾನು ಮುಂದು ನಾನು ಮುಂದು ಎಂದು ವಯಸ್ಕರು

ಬಂದು ಶಾಲೆಗೆ ಸೇರುವರು ಎಂದು ನಾವು ನಿರೀಕ್ಷಿಸಬಾರದು. ಒಂದು ಹೆಚ್ಚು ಜನ ಬಂದರೂ ಓದಿನಲ್ಲಿ ಅವರ ಉತ್ಸಾಹ ಮೊದಲನೆಯ ದಿ ಇದ್ದಂತೆ ಇರುವುದಿಲ್ಲ. ಆದ್ದರಿಂದ ವಯಸ್ಕರಿಗೆ ಓದಿನಲ್ಲಿ ಉತ್ಸಾಹ ಸುವುದು ಅಗತ್ಯ. ಶಾಲೆ, ಅಲ್ಲಿನ ನಡೆವಳಿಕೆ, ಉಪಾಧ್ಯಾಯರು—ಇವೆ ವಯಸ್ಕರಿಗೆ ಸಂತೋಷದಿಂದ ಕೂಡಿದ ನೆನಪಾಗಬೇಕು. ಸಂತೋ ಸಂಬಂಧವನ್ನು (Happy associations) ಇವುಗಳೊಡನೆ ಏರ್ಪ ಬೇಕು. ಪಾಠ ಹೇಳುವುದಕ್ಕಿಂತ ಇವು ಹೆಚ್ಚು ಕಷ್ಟ. ಉಪಾಧ್ಯಾ ಇವುಗಳಿಗೆ ಗಮನ ಕೊಡಬೇಕು. ಉತ್ತೇಜನ ಕೊಡುವ ಸಂದರ್ಭಗ ಉಪಯೋಗಿಸಿಕೊಂಡು ವಿದ್ಯಾರ್ಥಿಗಳ ಬೆನ್ನು ತಟ್ಟುತ್ತಿರಬೇಕು, ತ ಹೇಳಿದರೂ ಅದನ್ನು ದೊಡ್ಡದು ಮಾಡದೆ ಸೂಕ್ಷ್ಮವಾಗಿ ತಿಳಿಸಬೆ ಉದಾಹರಣೆಗೆ 'ಹ' ಕ್ಕೂ 'ಅ' ಕ್ಕೂ ಉಚ್ಚಾರಣೆಯಲ್ಲಿ ವ್ಯತ ಅನೇಕರಿಗೆ ತಿಳಿಯದು. ಅದನ್ನು ಸರಿಪಡಿಸದ ಹೊರತು ಮುಂದುವರಿ ವುದಿಲ್ಲ ಎಂದು ಹಟ ತೊಡದೆ ಆಗಾಗ್ಗೆ ವ್ಯತ್ಯಾಸವನ್ನು ಸೂಚಿಸುತ್ತಿರಬೆ ಆದರೆ ತಾನು ಮಾತ್ರ ಸ್ಪಷ್ಟವಾಗಿ ಉಚ್ಚಾರಣೆ ಮಾಡಿ ತೋರಿಸಬೆ ಅದೇ ರೀತಿಯಲ್ಲಿ ಮಹಾಪ್ರಾಣಾಕ್ಷರಗಳನ್ನೂ **ಶ, ಷ, ಸ** ಗಳ ಉಚ್ಚಾರಣ ವ್ಯತ್ಯಾಸವನ್ನೂ ಕ್ರಮೇಣ ಮನದಟ್ಟುಮಾಡಿಸಬೇಕು.

ವಿದ್ಯಾರ್ಥಿಗಳು ಕೊಳೆ ಬಟ್ಟೆಯನ್ನು ಹಾಕಿಕೊಂಡು ಶಾಲೆಗೆ ಬರ ದ್ದರೆ ನಿತ್ಯವೂ ಅದನ್ನು ಕುರಿತು ಉಪದೇಶಮಾಡುವುದು ಸರಿಯಲ್ಲ. ಕೆ ರಲ್ಲಿ '**ಕುಡಿಯುವ ಚಾಳಿ**' ಇರುತ್ತದೆ. ನಿತ್ಯವೂ ಕುಡಿಯುವ ಅಪಾಯ, ಅನಾನುಕೂಲಗಳು—ಇವುಗಳನ್ನು ಕುರಿತು ಉಪನ್ಯಾಸಗಳ ಕೊಡುವುದರಿಂದ ಫಲವಿಲ್ಲ. ಮೊದಲು ಉಪಾಧ್ಯಾಯನು ತನ್ನ ವಿದ್ಯಾ ಗಳ ನಂಬಿಕೆ ವಿಶ್ವಾಸಗಳನ್ನು ಸಂಪಾದಿಸಲು ಯತ್ನಿಸಿದರೆ, ಕ್ರಮೇಣ ಗಳಿಗೆ ಗಮನ ಕೊಡಬಹುದು. ಅವರ ಯೋಗಕ್ಷೇಮವನ್ನು ವಿಚಾ ಕೊಂಡು ಅವರ ಸುಖ ದುಃಖಗಳಲ್ಲಿ ತಾನೂ ಭಾಗಿಯೆಂದು ಅವ ಮನದಟ್ಟು ಮಾಡಿಸಬೇಕು. ಆದ್ದರಿಂದ ತರಗತಿಯ ಪಾಠದ ಆರಂ ಮುಂಚೆ ೧೦–೧೫ ನಿಮಿಷಗಳ ಕಾಲವನ್ನು ಈ ಯೋಗಕ್ಷೇಮ ವಿಚಾ ಸಂಭಾಷಣೆಗಳಿಗೋಸ್ಕರ ಮೀಸಲಾಗಿಟ್ಟಿದೆ. ಅಲ್ಲದೆ ಆರಂಭವಲ್ಲಿ

ವಿದ್ಯಾರ್ಥಿಗಳೊಂದಿಗೆ ಕಲೆತು ದೇವತಾಪ್ರಾರ್ಥನೆಯನ್ನು ಮಾಡುವ ನಿಯಮವನ್ನು ಇಟ್ಟುಕೊಳ್ಳುವುದು ಒಳ್ಳೆಯದು.

ಜನರಲ್ಲಿ ಆತ್ಮಗೌರವವನ್ನು ಹುಟ್ಟಿಸುವುದು ವಯಸ್ಕರ ವಿದ್ಯಾಭ್ಯಾಸದ ಒಂದು ಉದ್ದೇಶ. ಇದನ್ನು ಸಾಧಿಸುವ ದೃಷ್ಟಿಯಿಂದಲೇ ವಯಸ್ಕರ ಓದುವ ಪುಸ್ತಕದ ಪಾಠಗಳನ್ನು ಬರೆದಿದೆ. ಉಪಾಧ್ಯಾಯರು ಇದನ್ನು ತಿಳಿದುಕೊಂಡು ಇದಕ್ಕೆ ವಾತಾವರಣವನ್ನು ತರಗತಿಯಲ್ಲೂ ಹೊರಗೂ ಕಲ್ಪಿಸಬೇಕು.

ವಯಸ್ಕರ ಶಾಲೆಯ ವಿದ್ಯಾರ್ಥಿಗಳ ನಂಬಿಕೆ ವಿಶ್ವಾಸಗಳನ್ನು ಉಪಾಧ್ಯಾಯರು ಸಂಪಾದಿಸಿದ್ದರೆ ಅವರು ಉಪಾಧ್ಯಾಯರಿಗೆ ಅನೇಕ ಪ್ರಶ್ನೆಗಳನ್ನು ಹಾಕುವರು. ಇದನ್ನು ಉಪಾಧ್ಯಾಯರು ಪ್ರೋತ್ಸಾಹಿಸಬೇಕು. ಸಂತೋಷಚಿತ್ತದಿಂದ ಎಲ್ಲಕ್ಕೂ ಉತ್ತರ ಕೊಡುವ ಮನೋಭಾವವುಳ್ಳವರಾಗಿರಬೇಕು. ಸಾಮಾನ್ಯ ಜನತೆಯನ್ನು ಕುರಿ ಹಿಂಡಿನಂತೆ ಕಾಣುವ ಕಾಲ ಹೋಯಿತು. ದೇಶದ ಎಲ್ಲ ಜನರನ್ನೂ ಸುಶಿಕ್ಷಿತರನ್ನಾಗಿ ಮಾಡಿ, ಅವರನ್ನು ಯೋಚನಾಪರರನ್ನಾಗಿ ಮಾಡುವುದು ವಯಸ್ಕರ ಶಿಕ್ಷಣದ ಧ್ಯೇಯ. ಆದ್ದರಿಂದ ಪ್ರಶ್ನೆ ಕೇಳುವುದನ್ನು ಪ್ರೋತ್ಸಾಹಿಸಿ ಅವರ ಪ್ರಶ್ನೆಗಳಿಗೆ ಉತ್ತರ ಕೊಡಲು ಯತ್ನಿಸಬೇಕು.

ವಯಸ್ಕರ ಶಾಲೆಗಳಲ್ಲಿ ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ರೂಢಿಯಾದ ಗ್ರಾಮ್ಯ ಮಾತುಗಳನ್ನೇ ತಮ್ಮ ಭಾಷೆಯಲ್ಲಿ ಉಪಯೋಗಿಸಬೇಕೆ? ತಮಗೆ ರೂಢಿಯಾಗಿರುವ ವ್ಯಾಕರಣ ಶುದ್ಧವಾದ ಮಾತುಗಳನ್ನು ಬಳಸಬೇಕೆ? ಗ್ರಾಮ್ಯವನ್ನು ಬಳಸುವುದರಿಂದ ವಿದ್ಯಾರ್ಥಿಗಳ ವಿಶ್ವಾಸವನ್ನೂ ಪ್ರೀತಿಯನ್ನೂ ಸಂಪಾದಿಸಲು ಸುಲಭವಾಗಬಹುದು. ಆದರೆ ಅವರು ಗ್ರಾಮ್ಯವನ್ನು ಬಿಟ್ಟು ಶುದ್ಧವಾದ ಮಾತುಗಳನ್ನು ಕಲಿಯುವುದು ಹೇಗೆ? ಅವರ ಉಚ್ಚಾರಣೆ ಶುದ್ಧವಾಗುವುದು ಹೇಗೆ? ಇತರರು ಮಾತನಾಡುವುದನ್ನು ಕೇಳಿದರೆ ಅವರು ಕಲಿಯಬಹುದು, ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬಹುದು. ಉಪಾಧ್ಯಾಯರೂ ಗ್ರಾಮ್ಯ ಭಾಷೆಯನ್ನೇ ಬಳಸಿದರೆ ಅವರು ತಮ್ಮ ಉಚ್ಚಾರಣೆಯನ್ನಾಗಲಿ, ಭಾಷೆಯನ್ನಾಗಲಿ ತಿದ್ದಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಇಷ್ಟು ಹೇಳಿದ ಮೇಲೆ (ಪಾಠವನ್ನು ಹೇಳಿಕೊಡುವ ವಿಧಾನ, ಇವುಗಳನ್ನು ಮುಂದಿನ ಲೇಖನದಲ್ಲಿ ವಿವರಿಸಿದೆ) ವಯಸ್ಕರ ಶಾಲೆಯ ಉ ಧ್ಯಾಯರು ತಮಗೆ ಒಪ್ಪಿಸಿರುವ, ಅಥವಾ ತಾವು ಸಂತೋಷದಿಂದ ಉತ್ಸಾಹದಿಂದಲೂ ಮಾಡಲು ಒಪ್ಪಿರುವ ಕೆಲಸವನ್ನು ಸಮರ್ಪಕ ನಿರ್ವಹಿಸಲು ಒಂದೆರಡು ವಿಷಯಗಳನ್ನು ನೆನಪಿನಲ್ಲಿಡಬಹುದು. ಉ ಧ್ಯಾಯರಿಗೆ ತಮ್ಮ ಕೆಲಸದಲ್ಲಿ ಉತ್ಸಾಹ ಏಕರೀತಿಯಾಗಿರುವುದಿಲ್ಲ. ಬರುತ್ತ, ಕೆಲಸದಲ್ಲಿ ಕಷ್ಟಗಳು ತೋರಿದಂತೆಲ್ಲ, ತಮ್ಮ ಉತ್ಸಾಹ ಮ ವಾಗುತ್ತದೆ. ಅಲ್ಲದೆ ತರಗತಿಗಳನ್ನು ನಡಸುವ ಸ್ಥಳ, ಸನ್ನಿವೇಶ, ತ ವಿದ್ಯಾರ್ಥಿಗಳ ಉಡಿಗೆತೊಡಿಗೆಗಳು, ಅಭ್ಯಾಸಗಳು, ಅವರ ನಡೆನುಡಿ ಅಷ್ಟೇನೂ ಉತ್ಸಾಹ ಹುಟ್ಟಿಸುವಂತಹವುಗಳಲ್ಲ. ಆದರೂ ಉಪಾಧ್ಯಾಯ ಸಂತೋಷಚಿತ್ತದಿಂದ ಕೆಲಸಮಾಡುವುದನ್ನು ಕಲಿಯಬೇಕು. ಇದ ಸಾಧಿಸಲು ನಮ್ಮದು ಒಂದೆರಡು ಸಲಹೆ :—ಈ ಶಾಲೆಗಳಿಗೆ ವಾರಕ್ಕೊ ದಿನ ರಜಾ ದಿನವನ್ನು ಗೊತ್ತುಮಾಡಿದೆ. ಆ ದಿನ ಶಾಲೆಯ ಕೆಲಸವ ಪೂರ್ತಿಯಾಗಿ ಮರೆತು ವಿಶ್ರಾಂತಿ ತೆಗೆದುಕೊಳ್ಳುವುದು ಆವಶ್ಯಕ. ದೇ ವಿಶ್ರಾಂತಿ ಕೊಡುವುದಕ್ಕಿಂತಲೂ ಮನಸ್ಸಿಗೆ ಹೆಚ್ಚು ವಿಶ್ರಾಂತಿ ಕೊಡಬೇ ಎಂದರೆ ವಯಸ್ಕರ ಶಾಲೆಯನ್ನು ಪೂರ್ತಿಯಾಗಿ ಮರೆತುಬಿಡಬೇಕು. ಆ ತಮ್ಮ ಮನಸ್ಸಿಗೆ ಆನಂದವನ್ನುಂಟುಮಾಡುವ ಯಾವುದಾದರೂ ಒ ಹವ್ಯಾಸದಲ್ಲಿ ನಿರತರಾಗಿರಬೇಕು. ತಮ್ಮ ಆತ್ಮವಿಕಾಸಕ್ಕಾಗಿ ಒಂದು ಪು ವ್ಯಾಸಂಗವೋ, ಸಂಗೀತದ ಅಭ್ಯಾಸವೋ, ಇಲ್ಲವೆ ಬರವಣಿಗೆಯೋ, ಯಾ ದಾದರೂ ತನ್ನನ್ನು ಮರೆಯಲು ಸಾಧಕವಾದ ಹವ್ಯಾಸದಲ್ಲಿ ನಿತ್ಯವೂ ಸ್ವ ಕಾಲ ಕಳೆಯಬೇಕು. ಮನೆಯಲ್ಲಿ ತಾನು ನಿತ್ಯಗಟ್ಟಲೆ ಮಾಡುವ ದೇ ಪೂಜೆ, ಪ್ರಾರ್ಥನೆ ಇವುಗಳಲ್ಲಿ ತನ್ನ ವಯಸ್ಕರ ಶಿಕ್ಷಣಶಾಲೆಯ ಜ್ಞಾಪಿಸಿಕೊಂಡು, ಅದನ್ನು ಚೆನ್ನಾಗಿ ನಡಸಲು ದೇವರು ತನಗೆ ಶಕ್ತಿಯ ಕೊಡಲೆಂದು ಪ್ರಾರ್ಥಿಸುವುದು ಒಳ್ಳೆಯ ಸಂಪ್ರದಾಯ. ಜನ ಸೇವೆ ದೇವರಿಗೆ ಮೆಚ್ಚಿಕೆಯಾದ ಸೇವೆ. ಅನಕ್ಷರಸ್ಥನಿಗೆ ಅಕ್ಷರ ದಾನ ಮಾಡು ದಕ್ಕಿಂತ ಹೆಚ್ಚಿನ ಸೇವೆ ಇಲ್ಲ. ಈ ಕೆಲಸಮಾಡಲು ಬೇಕಾಗುವ ದೇಹ ಮನೋಬಲಕ್ಕಾಗಿ ದೇವರನ್ನು ಪ್ರಾರ್ಥಿಸುವುದು ಒಳ್ಳೆಯದು. ಈ ರೀತಿ

ಧ್ಯಾನ ಮನನದಿಂದ ತನಗೆ ಒಂದು ಹೊಸ ಹುರುಪು, ಶಕ್ತಿ ನಿತ್ಯವೂ ಬರುತ್ತದೆ. ದೇಹಕ್ಕೆ ಟಾನಿಕ್ ಇದ್ದಂತೆ ಈ ರೀತಿಯ ಧ್ಯಾನ ಅಥವಾ ಪ್ರಾರ್ಥನೆ, ಮನಸ್ಸಿಗೆ ಒಂದು ಶಕ್ತಿಯನ್ನು ಕೊಡುವುದು.

ವಯಸ್ಕರ ಅಕ್ಷರ ಕಲಿಯುವ ಪುಸ್ತಕಗಳು

'ವಯಸ್ಕರ ಅಕ್ಷರ ಕಲಿಯುವ ಪುಸ್ತಕ'ದ ಮೊದಲನೆಯ ಭಾಗದಲ್ಲಿ ಉಚ್ಚಾರಣೆ ಮಾಡಲು ಸುಲಭವಾದ ಮೂವತ್ತೆರಡು ಮೂಲಾಕ್ಷರಗಳನ್ನು ಮಾತ್ರ ಕೊಟ್ಟಿದೆ. ಮಿಕ್ಕ ಮೂಲಾಕ್ಷರಗಳು, ಕಾಗುಣಿತ, ಒತ್ತುಗಳು–ಇವನ್ನೆಲ್ಲ ಈ ಪುಸ್ತಕದ ಎರಡನೆಯ ಭಾಗದಿಂದ ಕಲಿಯಬಹುದು.

ಕಲಿಯುವವನ ಕೈಯ ಓಟಕ್ಕೆ ಅನುಸಾರವಾಗಿ ಈ ಮೂವತ್ತೆರಡು ಅಕ್ಷರಗಳನ್ನು ಐದು ಗುಂಪುಗಳಾಗಿ ವಿಂಗಡಿಸಿದೆ. ಸಾಮಾನ್ಯವಾಗಿ ಎರಡು ದಿನಗಳಿಗೆ ಒಂದು ಗುಂಪಿನಂತೆ, ಹತ್ತು ಹನ್ನೆರಡು ದಿನಗಳಲ್ಲಿ ಈ ಅಕ್ಷರಗಳನ್ನೆಲ್ಲಾ ಕಲಿಸಬಹುದು. ಕೊನೆಯಲ್ಲಿ, ಈ ಅಕ್ಷರಗಳಲ್ಲೆ ಹಲವನ್ನು ಉಪಯೋಗಿಸಿ ಬರೆದ ಎರಡು ಚಿಕ್ಕ ಕಥೆಗಳನ್ನು ಕೊಟ್ಟಿದೆ. ಮೊದಲಲ್ಲಿ ಒಂದು ಪದವನ್ನೂ ಕೊಟ್ಟಿದೆ ಅದನ್ನು ಬಾಯಿಪಾಠ ಮಾಡಿಸಿದರೆ ಕಲಿಯಲು ಸುಲಭವಾಗುತ್ತದೆ. ಅದು ಎಷ್ಟು ಮಟ್ಟಿಗೆ ಅಕ್ಷರ ಕಲಿಯಲು ಸಹಾಯವಾಗಿದೆ ಎಂದು ಉಪಾಧ್ಯಾಯರು ದಯಮಾಡಿ ತಿಳಿಸಬೇಕು.

ಒಂದು ಅಕ್ಷರವನ್ನು ಬಿಡಿಯಾಗಿ ಕಲಿಸುವುದಕ್ಕಿಂತ ಅರ್ಥವುಳ್ಳ ಮಾತಿನ ಭಾಗವಾಗಿ ಕಲಿಸುವುದು ಉತ್ತಮ ಶಿಕ್ಷಣ ಸಂಪ್ರದಾಯ. ಇದನ್ನು ಈ ಪುಸ್ತಕದ ರಚನೆಯಲ್ಲಿ ಉದ್ದಕ್ಕೂ ಅನುಸರಿಸಿದೆ. ಪಾಠ ಹೇಳುವವರು ಒಂದು ಮಾತನ್ನು ಮೊದಲು ಕಪ್ಪುಹಲಗೆಯ ಮೇಲೆ ದೊಡ್ಡದಾಗಿ ಬರೆದು, ತಾವು ಗಟ್ಟಿಯಾಗಿ ಉಚ್ಚರಿಸಿ, ವಿದ್ಯಾರ್ಥಿಗಳಿಂದಲೂ ಉಚ್ಚಾರಣೆ ಮಾಡಿಸಿ, ಅದರ ಅರ್ಥವನ್ನು ನೆನಪುಮಾಡಿಕೊಡಬೇಕು. ಬಳಿಕ ಆ ಮಾತನ್ನು ವಿದ್ಯಾರ್ಥಿಗಳು ಬರೆಯುವ ಪುಸ್ತಕಗಳಲ್ಲಿಯಾಗಲೀ ಕಪ್ಪುಹಲಗೆಗಳ ಮೇಲೆಯಾಗಲೀ ಅವರಿಂದ ದೊಡ್ಡದಾಗಿ ಬರೆಸಬೇಕು. ಆಮೇಲೆ ಅವರು ಮಾತಿ

ನಲ್ಲಿರುವ ಅಕ್ಷರಗಳನ್ನು ಬಿಡಿಬಿಡಿಯಾಗಿ ವಿಂಗಡಿಸಿ ಗುರುತಿಸುವಂತೆ ಮಾ
ಬೇಕು. ಮುಂದಿನ ಮಾತನ್ನು ಕಲಿಸುವಾಗ ಅದರಲ್ಲಿ ಆಗಲೇ ಪರಿಚ
ವಾಗಿರುವ ಅಕ್ಷರಗಳನ್ನು ವಿದ್ಯಾರ್ಥಿಗಳು ಮೊದಲು ಗುರುತಿಸುವಂತೆ ಮಾ
ಮುಂದುವರಿಯಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಅಕ್ಷರದ ಆಕ
ವನ್ನು ಹೋಲುವ ವಸ್ತುವನ್ನೂ ನೆನಪುಮಾಡಿಕೊಟ್ಟು, ಕಪ್ಪುಹಲಗೆ
ಮೇಲೆ ಆ ವಸ್ತುವಿನ ಆಕೃತಿಯನ್ನು ಬರೆದು, ಅದಕ್ಕೂ ಅಕ್ಷರಕ್ಕೂ ಒಂ
ಸಂಬಂಧವನ್ನು ಕಲಿಯುವವರ ಮನಸ್ಸಿನಲ್ಲಿ ಉಂಟುಮಾಡಬೇಕು. ಉದ
ಹರಣೆಗೆ ' **ಗ** ' ಎಂಬ ಅಕ್ಷರ ' **ಗಂಟೆ** 'ಯಂತಿದೆ ಎಂದು ಹೇಳಿ ತೋರಿ
ಬಹುದು.

ಓದಿಗಿಂತ ಬರಹ ಸ್ವಾಭಾವಿಕವಾಗಿ ಕಷ್ಟ. ಆದರೆ ಅಕ್ಷರಸ್ಥನೆನ್ನಿ
ಕೊಳ್ಳಲು ಬರಹವನ್ನೂ ಕಲಿಯುವುದು ಆವಶ್ಯಕ. ಅಲ್ಲದೆ ಅಕ್ಷರಗಳನ್
ಗುರುತಿಸಲು ಬರಹ ವಿಶೇಷ ಸಹಕಾರಿಯಾಗುವುದು. ಆದ್ದರಿಂದ ಬರೆವಣಿ
ಯನ್ನು ಚೆನ್ನಾಗಿ ಅಭ್ಯಾಸಮಾಡಿಸಬೇಕು. ಅಕ್ಷರಗಳನ್ನು ದೊಡ್ಡದಾ
ಬರಸಬೇಕು. ಇದರಿಂದ ಅಕ್ಷರದ ಆಕಾರ ಸರಿಯಾಗಿ ಮನದಟ್ಟಾಗುತ್ತದೆ
ಕೈಯ ಓಟಕ್ಕೂ ಸೌಲಭ್ಯ ಹೆಚ್ಚು. ಈ ಮುದ್ರಣದಲ್ಲಿ ಚಿತ್ರಗಳನ್
ಕೊಟ್ಟಿದೆ. ಮಕ್ಕಳಿಗೆ ಕಲಿಸುವಾಗ ಚಿತ್ರಗಳ ಆವಶ್ಯಕತೆ ಹೆಚ್ಚಾದರೂ ಚಿತ್ರ
ಗಳುಳ್ಳ ಪುಸ್ತಕ ವಯಸ್ಕರಿಗೂ ಹೆಚ್ಚು ಉತ್ಸಾಹವನ್ನು ಹುಟ್ಟಿಸುತ್ತದೆ
ಜೊತೆಗೆ, ಕಲಿಯಲು ಸಹಕಾರಿಯೂ ಹೌದು.

" ವಯಸ್ಕರ ಅಕ್ಷರ ಕಲಿಯುವ ಪುಸ್ತಕ " ದ ಎರಡನೆಯ ಭಾಗ
ವನ್ನು ಕೈಗೆ ತೆಗೆದುಕೊಳ್ಳುವ ವೇಳೆಗೆ ವಿದ್ಯಾರ್ಥಿಗಳು ಸುಲಭವಾದ ಮೂಲಾ
ಕ್ಷರಗಳನ್ನು ಕಲಿತಿರುತ್ತಾರೆ. ಉಳಿದ ಮೂಲಾಕ್ಷರಗಳು, ಕಾಗುಣಿತ,
ಒತ್ತುಗಳು—ಇವನ್ನೆಲ್ಲಾ ಈ ಭಾಗದಿಂದ ಕಲಿಯಬಹುದು.

ಇದು ಕಾಗುಣಿತದಿಂದ ಆರಂಭವಾಗುತ್ತದೆ. ಕಾಗುಣಿತದ ರೂಪವನ್ನು
ಕಲಿಸುವುದಕ್ಕೆ ಮುಂಚೆ, ಅಕ್ಷರದಲ್ಲಿ ಈ ಬಗೆಯ ರೂಪವ್ಯತ್ಯಾಸಕ್ಕೆ ಆವಶ್ಯ
ಕತೆ ಏನೆಂಬುದನ್ನು ತೋರಿಸಬೇಕು. ಉದಾಹರಣೆಗೆ, ತರಗತಿಯಲ್ಲಿ ಮಾರ
ಎಂಬ ವಿದ್ಯಾರ್ಥಿಯಿದ್ದರೆ, " ನಿನ್ನ ಹೆಸರನ್ನು ಬರೆ " ಎಂದು ಅವನಿಗೆ ಹೇಳ
ಬಹುದು. ಅವನು **ಮರ** ಎಂದು ಬರೆಯುತ್ತಾನೆ. " ಇದು **ಮರ** ಆಯಿತ

ಮಾರ ಎನ್ನಬೇಕಾದರೆ 'ಮ' ಕ್ಕೆ ಒಂದು ಇಳಿ (ಅಥವಾ ದೀರ್ಘ) ಕೊಡಬೇಕು" ಎಂದು ತಿಳಿಸಿ ಬರೆದು ತೋರಿಸಬೇಕು. ಬಳಿಕ ಬ, ಕ–ಮೊದಲಾದವುಗಳಿಂದ ಆರಂಭವಾಗುವ ಮಾತುಗಳನ್ನು ಮೊದಲು ಬರೆಸಿ, ಅದೇ ಅಕ್ಷರಗಳಲ್ಲಿ ದೀರ್ಘದಿಂದ ಆರಂಭವಾಗುವ ಮಾತುಗಳನ್ನು ಹೇಳಬೇಕು, ಬರೆಸಬೇಕು. ಉಳಿದ ಕಾಗುಣಿತ ರೂಪಗಳನ್ನೂ ಇದೇ ರೀತಿಯಲ್ಲಿ ಹೇಳಿಕೊಡಬೇಕು; ಕ, ಕಾ, ಕಿ, ಕೀ........ಈ ಪಟ್ಟಿಯನ್ನು ಬಾಯಿಪಾಠ ಮಾಡಿಸಿ ಬರೆಸಬೇಕಾದದ್ದಿಲ್ಲ.

ಒತ್ತಕ್ಷರದ ಪಾಠಗಳನ್ನು ಮೂಲಾಕ್ಷರದಂತೆಯೇ ಇರುವ ಒತ್ತುಗಳಿಂದ ಆರಂಭಮಾಡಿದೆ. ಉದಾಹರಣೆ: **ಹಬ್ಬ, ಅಜ್ಜ, ಅಣ್ಣ**. ಆಮೇಲೆ ಸ್ವಲ್ಪ ವ್ಯತ್ಯಾಸ ತೋರುವ ಒತ್ತುಗಳು ಬರುತ್ತವೆ. ಉದಾಹರಣೆ: **ಉದ್ದ, ಹಗ್ಗ, ಗಡ್ಡ**. ಕಡೆಕಡೆಗೆ ಮೂಲಾಕ್ಷರದ ಆಕಾರಕ್ಕೆ ಸಂಬಂಧ ತೋರಿದ ಒತ್ತುಗಳನ್ನು ಕೊಟ್ಟಿದೆ. ಉದಾಹರಣೆ: **ಬತ್ತ, ಅನ್ನ, ಅಮ್ಮ**. ಮೊದಲ ಕೆಲವು ಪಾಠಗಳಲ್ಲಿ ಸಜಾತೀಯ ಒತ್ತಕ್ಷರಗಳನ್ನೇ ಕೊಟ್ಟು, ಆ ಬಳಿಕ **ಅಲ್ಪ ಸ್ವಾಮಿ, ಕುಸ್ತಿ, ಚಕ್ರ**— ಈ ಬಗೆಯ ವಿಜಾತೀಯ ಒತ್ತಕ್ಷರಗಳನ್ನು ಕ್ರಮಕ್ರಮವಾಗಿ ಅಭ್ಯಾಸ ಮಾಡಿಸುವಂತೆ ಪಾಠಗಳನ್ನು ರಚಿಸಲಾಗಿದೆ.

ಇದೆಲ್ಲ ಆದ ಬಳಿಕ, ಉಚ್ಚಾರಣೆಗೆ ಅಷ್ಟು ಸುಲಭವಲ್ಲದ ಶ, ಷ, ಮಹಾಪ್ರಾಣಗಳು, ಙ, ಞ, ಋ, ವಿಸರ್ಗ—ಅವನ್ನು ಕೊಟ್ಟಿದೆ. (ಅವಕ್ಕೆ ಸಂಬಂಧಿಸಿದ ಕಾಗುಣಿತ, ಒತ್ತು ಮೊದಲಾದವನ್ನೂ ಆಯಾ ಪಾಠಗಳಲ್ಲೇ ಕಲಿಸಬೇಕು.) ಙ, ಞ, ಋ ಮೊದಲಾದ ಕೆಲವು ಅಕ್ಷರಗಳು ಕನ್ನಡದಲ್ಲಿ ಹೆಚ್ಚು ಬಳಕೆಯಲ್ಲಿಲ್ಲ; ಆದರೂ ಅವುಗಳ ಪರಿಚಯವನ್ನು ಪಡೆದ ಹೊರತು ಒಬ್ಬನ ಅಕ್ಷರಜ್ಞಾನ ಪೂರ್ಣವಾಗುವುದಿಲ್ಲವಾದ ಕಾರಣ ಅವನ್ನು ಕಲಿಸುವ ಪಾಠಗಳನ್ನೂ ಕೊಟ್ಟಿದೆ. ಈ ಅಕ್ಷರಗಳನ್ನು ಉಚ್ಚರಿಸುವುದು ವಿದ್ಯಾರ್ಥಿಗಳಿಗೆ ಕಷ್ಟವಾದಲ್ಲಿ ಆ ಅಂಶಕ್ಕೆ ಹೆಚ್ಚು ಗಮನ ಕೊಡದಿದ್ದರೂ ಬಾಧಕವಿಲ್ಲ.

ಕಲಿತ ಅಕ್ಷರಗಳನ್ನು ದೃಢಪಡಿಸುವುದಕ್ಕಾಗಿ ನಡುನಡುವೆ ಕೆಲವು ಪಾಠಗಳು ಬಂದಿವೆ. ಎಲ್ಲಕ್ಕೂ ಕಡೆಯಲ್ಲಿ ಓದುವ ಅಭ್ಯಾಸಕ್ಕಾಗಿ ವಿವಿಧ ವಿಷಯಗಳನ್ನು ಒಳಗೊಂಡ ಕೆಲವು ಪಾಠಗಳನ್ನು ಸೇರಿಸಿದೆ.

ಅಕ್ಷರವನ್ನು ಅರ್ಥವುಳ್ಳ ಒಂದು ಮಾತಿನ ಭಾಗವಾಗಿ ಕಲಿಸುವು
ಉತ್ತಮವೆಂದು ಈ ಪುಸ್ತಕದ ಮೊದಲನೆಯ ಭಾಗದ "ಬಿನ್ನಹ" ದ
ಹೇಳಿದೆಯಷ್ಟೆ. ಅದೇ ಕ್ರಮವನ್ನೇ ಇಲ್ಲಿಯೂ ಅನುಸರಿಸಲಾಗಿದೆ, ಅ
ಅಲ್ಲ; ವಾಕ್ಯ ವಾಕ್ಯಕ್ಕೆ ಸಂಬಂಧವಿರುವ ಒಂದು ಕಥೆಯೋ ವಿಷಯನಿರೂ
ಣೆಯೋ ಬರುವಂತೆ ಇದರ ಪಾಠಗಳನ್ನು ಬರೆದಿದೆ. ಇದರಿಂದ ಪಾಠಗ
ಅರ್ಥವತ್ತಾಗಿ, ಅವನ್ನು ಓದಲು ವಿದ್ಯಾರ್ಥಿಗಳಿಗೆ ಆಸಕ್ತಿ ಹುಟ್ಟುವುದೆಂ
ನಮ್ಮ ನಂಬಿಕೆ.

ಈ 'ಅಕ್ಷರ ಕಲಿಯುವ ಪುಸ್ತಕ' ದ ಎರಡು ಭಾಗಗಳನ್ನೂ ಓ
ಮುಗಿಸಲು ಸುಮಾರು ಎರಡೂವರೆ ತಿಂಗಳ ಕಾಲ ಬೇಕಾಗುವುದು. ಸಾಮ
ನ್ಯವಾಗಿ ದಿನಕ್ಕೆ ಒಂದು ಪಾಠದಂತೆ ಕಲಿಸಲು ಸಾಧ್ಯವಾಗುವುದೆಂದು ನಮ
ಅನುಭವ. ಕೆಲವು ಪಾಠಗಳು ಎರಡು ಪುಟಗಳನ್ನು ಆಕ್ರಮಿಸಿವೆ. ಅ
ವನ್ನು ಮುಗಿಸಲು ಎರಡು ದಿನಗಳು ಬೇಕಾಗಬಹುದು.

ಈ ಪುಸ್ತಕವನ್ನು ಓದಿ ಮುಗಿಸಿದ ಮೇಲೆ ವಿದ್ಯಾರ್ಥಿ ಪಡೆಯು
ಯೋಗ್ಯತೆಯ ಮಟ್ಟವನ್ನು ಹೀಗೆ ವಿವರಿಸಬಹುದು; ತಕ್ಕಮಟ್ಟಿಗೆ ದಪ್ಪ
ವಾಗಿರುವ ಅಕ್ಷರಗಳಲ್ಲಿ ಅಚ್ಚುಮಾಡಿರುವುದನ್ನೂ ಬರೆದಿರುವುದನ್ನೂ ಓ
ತಿಳಿದುಕೊಳ್ಳುವುದು ; ತನ್ನ ಹೆಸರನ್ನು ತಪ್ಪಿಲ್ಲದೆ ರುಜುಮಾಡುವುದು
ಸುಲಭವಾದ ವಾಕ್ಯಗಳನ್ನು ತಾನೇ ಬರೆಯುವುದು. ಒಬ್ಬನು ಅಕ್ಷರಸ
ನೆನ್ನಿಸಿಕೊಳ್ಳಲು ಹೊಂದಿರಬೇಕಾದ ಕನಿಷ್ಠ ಯೋಗ್ಯತೆ ಇದು.

ವಿದ್ಯಾರ್ಥಿ ಓದು ಬರಹವನ್ನು ಇಲ್ಲಿಗೇ ನಿಲ್ಲಿಸಿದರೆ ಕೆಲವು ದಿನಗಳಲ್ಲಿ
ಅವನು ಅನಕ್ಷರಸ್ಥನ ಸ್ಥಿತಿಗೆ ಜಾರುವುದು ಖಂಡಿತ. ಅದನ್ನು ತಪ್ಪಿಸುವ
ದಕ್ಕೂ ಹೆಚ್ಚಿನ ತಿಳವಳಿಕೆಯನ್ನು ಅವನಿಗೆ ಉಂಟುಮಾಡಿಕೊಡುವುದಕ್ಕೂ
ಮತ್ತೆ ಎರಡೂವರೆ ತಿಂಗಳ ವ್ಯಾಸಂಗವು ಆವಶ್ಯಕ. ಈ ಮುಂದಿನ ಉದ್ದೇ
ವನ್ನು 'ವಯಸ್ಕರ ಓದುವ ಪುಸ್ತಕ' ವು ಸಾಧಿಸುತ್ತದೆ.

ಓದುವುದು, ಬರೆಯುವುದು

ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯ ಯೋಜನೆಯ ಪ್ರಕಾರ ಒಬ್ಬ ಅನಕ್ಷರಸ್ಥನು ಐದು ತಿಂಗಳ ಕಾಲದಲ್ಲಿ ಓದುಬರಹವನ್ನು ಸಾಮಾನ್ಯವಾಗಿ ಕಲಿಯುವುದು ಸಾಧ್ಯವೆಂದು ಹಿಂದೆ ತಿಳಿಸಿತಷ್ಟೆ. ಈ ಕಾರ್ಯವು ಸುಮಾರು ಐದು ಮೆಟ್ಟಲುಗಳಲ್ಲಿ ನಡೆಯುಬಹುದೆಂದು ವ್ಯವಸ್ಥೆ ಯಾಗಿದೆ. ಪ್ರತಿಯೊಂದು ಮೆಟ್ಟಲ ಕೆಲಸವನ್ನೂ ಈ ಕೆಳಗೆ ವಿವರಿಸಿದೆ; ಅದು ಸಾಧ್ಯವಾಗಲು ಉಪಾಧ್ಯಾಯರು ಕೈಗೊಳ್ಳಬೇಕಾದ ಬೋಧನ ಕ್ರಮ ವನ್ನೂ ವಿವರಿಸಲಾಗಿದೆ. ನುರಿತ ಉಪಾಧ್ಯಾಯರು ತಮಗೆ ಅನುಭವ ದಲ್ಲಿರುವ ಬೇರಾವ ಉತ್ತಮ ಮಾರ್ಗವನ್ನು ಬೇಕಾದರೂ ಅನುಸರಿಸ ಬಹುದು. ಇಲ್ಲಿ ಸೂಚಿಸಿರುವ ಕ್ರಮವು ಮೈಸೂರಿನ ಅನೇಕ ರಾತ್ರಿ ಶಾಲೆ ಗಳಲ್ಲಿ ರೂಢಿಯಲ್ಲಿರತಕ್ಕದ್ದು.

ಮೊದಲನೆಯ ಮೆಟ್ಟಲು-ಬಿಡಿ ಅಕ್ಷರಗಳು.—ಇವರಲ್ಲಿ ವಿದ್ಯಾರ್ಥಿ ಗಳು ಹುಟ್ಟಕ್ಷರಗಳನ್ನು ಕಲಿಯುತ್ತಾರೆ. ಇದನ್ನು ಸಂಪ್ರದಾಯ ರೀತಿ ಯಾಗಿ, ವ್ಯಾಕರಣ ಶಾಸ್ತ್ರದಲ್ಲಿ ಕಂಡುಬರುವ ವರ್ಗಗಳ ಪ್ರಕಾರ ಕಲಿಸು ವುದಿಲ್ಲ. ವರ್ಣಮಾಲೆಯಲ್ಲಿರುವ ಅಕ್ಷರಗಳ ಪೈಕಿ ಬಹು ಮುಖ್ಯವೂ ಕಲಿಯಲು ಸುಲಭವೂ ಆದ ಮೂವತ್ತೆರಡು ಅಕ್ಷರಗಳನ್ನು ಮಾತ್ರ ಆರಿಸಿ ಕೊಳ್ಳಲಾಗಿದೆ. ಇವುಗಳನ್ನು ಕೈಓಟದ ಪ್ರಕಾರ ಐದು ಗುಂಪುಗಳಾಗಿ ವಿಂಗಡಿಸಿದೆ. ಮೊದಲನೆಯ ಗುಂಪಿನ ಮೂಲ ಆಕಾರ ಅತಿ ಸುಲಭವಾಗಿ ಬರೆಯುಬಹುದಾದ **ವೃತ್ತ** ಅಥವ **ಸೊನ್ನೆ.** ಈ ಅಕ್ಷರಗಳನ್ನು ಹಲಗೆಯ ಮೇಲೆ ತಿದ್ದಿಸಿ ಕಲಿಸುವುದಿಲ್ಲ. ಅವುಗಳನ್ನು ಕಲಿಸುವುದು ಮಾತುಗಳ ಮೂಲಕ. ನಮ್ಮ ಮೊದಲನೆಯ ಪುಸ್ತಕದ ಮೊದಲದೆಯ ಮಾತು "**ಹರ.**" ಉಪಾಧ್ಯಾಯರು ಪುಸ್ತಕದಲ್ಲಿ ಇದನ್ನು ತೋರಿಸಿ ಓದುತ್ತಾರೆ. ಅನಂತರ ಕಪ್ಪು ಹಲಗೆಯಮೇಲೆ ಬರೆದು ಓದಿಸುತ್ತಾರೆ. ಇತರ ಮಾತುಗಳನ್ನೂ ಇದೇ ರೀತಿಯಲ್ಲಿ ಓದಿಸುತ್ತಾರೆ. ಪ್ರತಿಯೊಂದು ಮಾತಿನ ಅರ್ಥದ ಕಡೆಗೂ ವಿದ್ಯಾರ್ಥಿಯ ದೃಷ್ಟಿಯನ್ನು ಸೆಳೆಯುತ್ತಾರೆ. ಮಾತಿನ ಅರ್ಥವು ಅದರ ಆಕಾರವನ್ನು ಮನಸ್ಸಿನಲ್ಲಿ ಸ್ಥಿರವಾಗಿ ನಾಟಲು ಅನುಕೂಲಪಡಿಸುತ್ತದೆ.

ಮೊದಲನೆಯ ಪಾಠದ ಆರಂಭದಲ್ಲಿ ಬರೆದಿರುವ ಮಾತುಗಳನ್ನು ಪ್ರ
ಯೊಬ್ಬರಿಂದಲೂ ಕ್ರಮವಾಗಿ ಓದಿಸುತ್ತಾರೆ. ಒಟ್ಟಿಗೆ ಎಲ್ಲರಿಂದಲೂ ಏ
ಕಾಲದಲ್ಲಿ ಹೇಳಿಸುವುದು ಸರಿಯಲ್ಲ. ಒಬ್ಬೊಬ್ಬ ವಿದ್ಯಾರ್ಥಿಯನ್ನೂ ಪ್ರತ್ಯೇ
ವಾಗಿ ಓದುವಂತೆ ಹೇಳಿ, ಅವನು ತಪ್ಪಿದ ಕಡೆ ಮಾತ್ರ ಸರಿಪಡಿಸಬೇಕ
ಮಾತುಗಳನ್ನು ಉಚ್ಚಾರಮಾಡುವಾಗ ಉಚ್ಚಾರಣೆಯಲ್ಲಿ ಕಾಣಬರು
ತಪ್ಪುಗಳನ್ನು ತಿದ್ದಬೇಕು. **ಹ, ಸ** ಮುಂತಾದ ಕ್ಲಿಷ್ಟ ಅಕ್ಷರಗಳನ
ಉಚ್ಚರಿಸುವಾಗ ನಾಲಗೆಯ ಚಲನ ಹೇಗಿರಬೇಕೆಂದು ವಿವರಿಸಬೇಕು.
ರೀತಿ ವಿವರಣೆಯು ಉಚ್ಚಾರಣೆಯನ್ನು ಕ್ರಮಗೊಳಿಸಲು ಸಹಾಯ ಮಾಡ
ತ್ತದೆ. ಮಾತುಗಳನ್ನು ಕ್ರಮವಾಗಿ ಓದುವುದು ಬಂದನಂತರ ಅವುಗ
ಪೈಕಿ ಯಾವುದಾದರೂ ಒಂದನ್ನು ಕಪ್ಪುಹಲಗೆಯ ಮೇಲೆ ಬರೆದು ಅದನ
ಉಚ್ಚರಿಸುವಂತೆ ವಿದ್ಯಾರ್ಥಿಗೆ ಹೇಳಬೇಕು. ಒಂದು ತರಗತಿಯಲ್ಲಿ ಅಧ
ಪಾಲು ಜನ ಇತರರಿಗಿಂತ ಹಿಂದಾಗಿರುತ್ತಾರೆ. ಅವರ ವಿಷಯದಲ್ಲಿ
ವಿಶ್ವಾಸವೂ, ಗಮನವೂ ಅವಶ್ಯಕ. ಪಾಠವನ್ನು ಗ್ರಹಿಸುವುದರಲ್ಲಿ ಸ್ವಲ್
ಹಿಂದಾದರೆ ಕಲಿಯುವವನನ್ನು ದಂಡಿಸುವುದು, ಅವಮಾನ ಪಡಿಸುವುದ
ಪ್ರಾಥಮಿಕ ಶಾಲೆಗಳಲ್ಲಿ ಹಿಂದೆ ರೂಢಿಯಲ್ಲಿತ್ತು. ಈಗಲೂ ಕೆಲವುಕ
ರೂಢಿಯಲ್ಲಿದೆ. ವಯಸ್ಕರ ವಿಷಯದಲ್ಲಿ ಈ ರೀತಿಯ ಶಿಸ್ತನ್ನು ಸರ್ವಥ
ತ್ಯಜಿಸಬೇಕು. ಅವಮಾನಕರವಾದ ಮಾತುಗಳು ಅವರನ್ನು ಶಾಲೆಯಿಂ
ಓಡಿಸಲು ಅತಿ ಸುಲಭವಾದ ಉಪಾಯ. ಕೆಲಸವು ಫಲದಾಯಕ
ವಾಗಬೇಕೆಂಬ ಯೋಜಕರು ಇದನ್ನು ಬಾರಿಬಾರಿಗೂ ನೆನೆಯುವುದ
ಒಳ್ಳೆಯದು.

ಮಾತುಗಳನ್ನು ಕಲಿತನಂತರ ಅವುಗಳನ್ನು ಬಿಡಿಸಿ ಅಕ್ಷರಗಳನ್ನು
ಪ್ರತ್ಯೇಕವಾಗಿ ಉಚ್ಚರಿಸಬೇಕು. ಅಕ್ಷರಗಳನ್ನು ಪ್ರತ್ಯೇಕವಾಗಿ ಉಚ್ಚರಿಸಿ
ಅವುಗಳನ್ನು ಪುಸ್ತಕದಲ್ಲಿ ತೋರಿಸುವಂತೆ ಹೇಳಬೇಕು. ಅನಂತರ ಅವ
ಗಳನ್ನು ತಮ್ಮ ಪುಸ್ತಕದಲ್ಲಿ ಬರೆಯುವಂತೆ ತಿಳಿಸಬೇಕು. ಬರೆಯುವಾಗ
ಅಕ್ಷರಗಳು ನೋಟ್ ಪುಸ್ತಕಗಳ ಎರಡು ಗೀಟುಗಳನ್ನೂ ತುಂಬುವಂತೆ
ಬರೆಸಬೇಕು. ಈ ರೀತಿ ಮಾತುಗಳನ್ನೆಲ್ಲಾ ವಿದ್ಯಾರ್ಥಿಗಳಿಂದ ಎರಡೆರಡು
ಬಾರಿ ಬರೆಸಬೇಕು. ಬರೆಸುವುದರ ಮುಖ್ಯ ಉದ್ದೇಶ—ಅಕ್ಷರಗಳ ಆಕಾರವ

ಮನಸ್ಸಿನಲ್ಲಿ ನಿಲ್ಲುವಂತೆ ಮಾಡುವುದು. ಆದುದರಿಂದ ಬರೆಯುವ ರೂಪಕ್ಕೂ ಮುದ್ರಿಸಿರುವ ರೂಪಕ್ಕೂ ವ್ಯತ್ಯಾಸವಿರಕೂಡದು.

ಮೊದಲನೆಯ ಪಾಠಕ್ಕೆ ಎರಡು ದಿನಗಳೆಂದು ಗೊತ್ತುಮಾಡಿದೆ. ಎರಡನೆಯ ದಿನ, ಮೊದಲನೆಯ ದಿನದ ಪಾಠಭಾಗವನ್ನು ಪುನರಾವರ್ತನೆ ಮಾಡಿಸಬೇಕು. ರಾತ್ರಿ ಏಳೂವರೆ ಗಂಟೆಗೆ ಶಾಲೆಯು ಪ್ರಾರಂಭವಾದರೆ ಎಲ್ಲರೂ ಸೇರಲು ಕಾಲು ಗಂಟೆ ಬೇಕಾಗಬಹುದು. ಆ ವೇಳೆಯಲ್ಲಿ ಈ ಪುನರಾವರ್ತನೆಗೆ ಗಮನ ಕೊಡುವುದು ಒಳ್ಳೆಯದು. ಹೊತ್ತಾಗಿ ಬರುವ ಕೆಲವು ಮಂದಿಯನ್ನು ಮಾತ್ರ ಅನಂತರ ಪರೀಕ್ಷಿಸಿ ಮುಂದಿನ ಪಾಠವನ್ನು ಉಪಕ್ರಮಿಸಬಹುದು. ಹಿಂದಿನ ಪಾಠವು ಸರಿಯಾಗಿ ಬಂದಿಲ್ಲವೆಂದು ವಿದ್ಯಾರ್ಥಿಗಳಿಗೆ ಹೊಸಪಾಠವನ್ನು ಕಲಿಸದಿರುವದು ಯುಕ್ತವಲ್ಲ. ವಯಸ್ಕರಿಗೆ ಜಾಗ್ರತೆಯಾಗಿ ಕಲಿಸಬಹುದೆಂಬ ನಂಬಿಕೆ ಬಂದಲ್ಲದೆ ಅವರು ಕೆಲಸದಲ್ಲಿ ಉತ್ಸಾಹವನ್ನು ತಾಳುವುದಿಲ್ಲ.

ಎರಡನೆಯ ಪಾಠದಲ್ಲಿ ಮೊದಲನೆಯ ಪಾಠದಷ್ಟು ಕಷ್ಟವು ಪ್ರಾಯಶಃ ಕಂಡುಬರಲಾರದು. ವಿದ್ಯಾರ್ಥಿಗಳಿಗೆ ಸ್ವಲ್ಪಮಟ್ಟಿಗೆ ಅಭ್ಯಾಸವಾಗಿರುತ್ತದೆ. ಚಿತ್ರಗಳ ಸಹಾಯ ಮತ್ತು ಮಾತುಗಳ ಅರ್ಥದ ಸಹಾಯದಿಂದ ಪಾಠವು ಹೆಚ್ಚು ತೊಡಕಿಲ್ಲದೆ ನಡೆಯಲು ಅನುಕೂಲವಾಗುತ್ತದೆ. ಇತರ ಪಾಠಗಳನ್ನು ಮಾಡುವಾಗಲೂ ಈ ಸೌಕರ್ಯವು ಕಂಡುಬರುತ್ತದೆ. ಒಟ್ಟಿನಲ್ಲಿ ಮೊದಲನೆಯ ಭಾಗದ ಆರು ಪಾಠಗಳನ್ನು ಹನ್ನೆರಡು ದಿವಸಗಳಲ್ಲಿ ಮುಗಿಸಬೇಕು. ಈ ಪಾಠಗಳನ್ನು ಉರುಹೊಡೆದು ನೆನಪಿಟ್ಟುಕೊಳ್ಳುವ ರೂಢಿಯನ್ನು ತಪ್ಪಿಸಿ ಮಧ್ಯೆಮಧ್ಯೆ ಮಾತುಗಳನ್ನು ತೋರಿಸಿ ಅವರಿಂದ ಉಚ್ಚರಿಸುವ ರೂಢಿಮಾಡಿಸುವುದು ಒಳ್ಳೆಯದು. ಬರವಣಿಗೆಯಲ್ಲಿ ಅಭಿವೃದ್ಧಿಯು ಸ್ವಲ್ಪ ಹಿಂದಾದರೆ ನಿರಾಶರಾಗಬೇಕಾಗಿಲ್ಲ.

ಎರಡನೆಯ ಮೆಟ್ಟಲು-ಇಳೀ ಕಾಗುಣಿತಗಳು.—ಈಗ ಇಳೀ ಕಾಗುಣಿತಗಳನ್ನು ಹೇಳಿಕೊಡಲಾಗುತ್ತದೆ. "ಮಾರ" ಎನ್ನುವವನ ಹೆಸರನ್ನು ಬರೆಯುವಂತೆ ಹೇಳಿ, ಒಬ್ಬ ವಿದ್ಯಾರ್ಥಿಯು ಬರೆದುದನ್ನು ಓದಿಸಿ. ಮೊದಲನೆಯವನು ಮಾರ ಎಂದು ಬರೆದಿರುವುದಿಲ್ಲ; ಮರ ಎಂದು ಬರೆದಿರುತ್ತಾನೆ. ಮಾರ ಎನ್ನುವವನ ಹೆಸರನ್ನು ಬರೆಯುವುದನ್ನು ಬಿಟ್ಟು, ಜಡ

ವಸ್ತುವಾದ ಮರದ ಹೆಸರನ್ನು ಬರೆದಿರುವುದು ವಿದ್ಯಾರ್ಥಿಗಳಲ್ಲಿ ನಗುವನ್ನು ಉಂಟುಮಾಡಬಹುದು. ಇದರಿಂದ ಮರದ ಹೆಸರನ್ನೂ, ಮಾರನ ಹೆಸರನ್ನೂ ಪ್ರತ್ಯೇಕಿಸಿ ಬರೆಯುವ ಉಪಾಯದ ಆವಶ್ಯಕತೆ ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿಯುತ್ತದೆ. ಈಗ ಕಪ್ಪು ಹಲಗೆಯ ಮೇಲೆ "ಮ" ಬರೆದು ಅದಕ್ಕೆ ಇಳಿಯನ್ನು ಕೊಟ್ಟು "ಮಾ" ಎಂದು ಸ್ಪಷ್ಟವಾಗಿ ಹೇಳಿ ಪಕ್ಕದಲ್ಲಿ "ರ" ಬರೆದು ಮಾರ ಎಂದು ಉಚ್ಚರಿಸಬೇಕು. "ಮಾ" ಬರೆದು ಪಕ್ಕದಲ್ಲಿ "ದ" ಬರೆದು ಈ ಮಾತನ್ನು ಉಚ್ಚರಿಸುವಂತೆ ತಿಳಿಸಿ. ಅನಂತರ "ಮಾದ" ಎಂಬ ಮಾತನ್ನು ಹೇಳಿ ಬರೆಯಿಸಿ. ಹೀಗೆ "ಮ" ಅಕ್ಷರಕ್ಕೆ ಇಳಿಯನ್ನು ಕೊಡು ವುದು ಬಂದಮೇಲೆ "ಬಾಲ" ಎಂದು ಹೇಳಿ ಬರೆಯಿಸಿ. "ಬಲ" ಎಂದು ಬರೆದಿದ್ದರೆ ಈ ಎರಡು ಮಾತುಗಳ ಅರ್ಥ ವ್ಯತ್ಯಾಸವನ್ನು ನೆನಪುಮಾಡಿ. ಈಗ ಪುಸ್ತಕದಲ್ಲಿ ಪಾಠವನ್ನು ಓದಿಸಿ. ಪ್ರತಿಯೊಬ್ಬರಿಗೂ ಕೆಲವು ಮಾತು ಗಳನ್ನು ಉಕ್ತಲೇಖನಕ್ಕೆ ಕೊಡಿ. "ಕ" "ಜ" "ಮ" "ಪ" ಮುಂತಾದ ಅಕ್ಷರಗಳಿಗೆ ಇಳಿಯನ್ನು ಯಾವ ಭಾಗದಲ್ಲಿ ಕೊಡಬೇಕು ಎಂಬುದನ್ನು ಸರಿಯಾಗಿ ತಿಳಿಸಿ. "ಬಂಗಾರ" ಎಂಬ ಶಬ್ದವನ್ನು ಓದುವಾಗ ಒಂದೊಂದು ಅಕ್ಷರವನ್ನೂ ಕಾಗುಣಿತ ಸಮೇತ ಹೇಳಿ, ಅನಂತರ ಮಾತನ್ನು ಉಚ್ಚರಿಸುವ ವಾಡಿಕೆ ಕೆಲವು ಕಡೆ ಇದೆ. ಹೇಗೆಂದರೆ "ಬ" ಕ್ಕೆ ತಲಕೊಟ್ಟು ಬ, "ಬ" ಕ್ಕೆ ಒಂದು ಸೊನ್ನೆ ಬಂ, "ಗ" ಕ್ಕೆ ಇಳಿ ಗಾ, ಬಂಗಾ, "ರ" ಕ್ಕೆ ತಲಕೊಟ್ಟು ರ, ಬಂಗಾರ. ಈ ರೀತಿ ಪ್ರತಿಯೊಂದು ಅಕ್ಷರವನ್ನೂ ಜೋಡಿಸಿ ಉಚ್ಚರಿ ಸುವ ಆವಶ್ಯಕತೆ ಪ್ರಾರಂಭದಲ್ಲಿ ಕಂಡುಬರಬಹುದು ; ಆದರೂ ಇದು ತಪ್ಪು ಸಂಪ್ರದಾಯ. ಇದನ್ನು ಆದಷ್ಟು ಬೇಗ ಬಿಟ್ಟು ವಿದ್ಯಾರ್ಥಿಗಳು ಮಾತನ್ನು ಒಟ್ಟಾಗಿ ಓದುವ ರೂಢಿ ಮಾಡಿಸಬೇಕು. ಅಕ್ಷರಗಳೆಲ್ಲಾ ಸೇರಿ ಒಂದು ಮಾತೇ ಹೊರತು, ಎಂದರೆ– "ಮಹಾರಾಜ" ಎಂಬುದಕ್ಕೆ ಒಂದು ಅರ್ಥ ವಿದೆಯೇ ಹೊರತು, ಈ ಮಾತಿನ ಬಿಡಿ ಅಕ್ಷರಗಳಿಗೆ ಅರ್ಥವೇ ಇಲ್ಲವೆಂಬು ದನ್ನು ತಿಳಿಸಿ. ಮಾತನ್ನು ಒಟ್ಟಾಗಿ ಹೇಳದಿದ್ದರೆ ಕೇಳುವವರಿಗೆ ಬೇಜಾ ರಾಗುತ್ತದೆ ಎಂದೂ ತಿಳಿಸಬೇಕು.

ಪ್ರತಿ ಕಾಗುಣಿತವನ್ನೂ ಇದೇ ಕ್ರಮದಲ್ಲಿ ಬೋಧಿಸಬೇಕು. ಇದ ಕ್ಕಾಗಿ ಐದು ಹೊಸಪಾಠಗಳು, ಏಳು ಅಭ್ಯಾಸ ಪಾಠಗಳು ಕೊಟ್ಟಿವೆ

ಇವುಗಳಲ್ಲಿ ಬಿಡಿ ಮಾತುಗಳನ್ನು ಕೊಡದೆ ಅವರಿಗೆ ಹಿತವಾದ ಒಂದು ವಿಷಯವನ್ನೋ, ಕಥೆಯನ್ನೋ ಕೆಲವು ಸುಲಭ ವಾಕ್ಯಗಳಲ್ಲಿ ಬರೆದಿರುವುದು ಈ ಪುಸ್ತಕದ ವೈಶಿಷ್ಟ್ಯ. ಇದು ವಿದ್ಯಾರ್ಥಿಗಳಿಗೆ ಹೆಚ್ಚು ಆಸಕ್ತಿಯನ್ನು ಉಂಟುಮಾಡಬಹುದೆಂದು ನಂಬಿದೆ. ಈ ಭಾಗದಲ್ಲಿ ಹೆಚ್ಚು ಪುನರಾವರ್ತನೆ ಅವಶ್ಯಕ. ಹನ್ನೆರಡು ಪಾಠಗಳಿಗೆ ಹದಿನೈದು ಇಪ್ಪತ್ತು ದಿನಗಳಾದರೂ ಚಿಂತೆ ಇಲ್ಲ. ಬರವಣಿಗೆಯಲ್ಲಿ ವಿದ್ಯಾರ್ಥಿಗಳು ಸ್ವಲ್ಪ ಹಿಂದಾಗಿರುತ್ತಾರೆ; ಇದು ಕ್ರಮಪಟ್ಟಲ್ಲದೆ ಮುಂದಿನ ಪಾಠಕ್ಕೆ ಹೋಗುವುದಿಲ್ಲವೆಂಬ ಶಪಥ ಅನಾವಶ್ಯಕ. ಕ್ರಮೇಣ ಬರವಣಿಗೆ ಸರಿಹೋಗುತ್ತದೆ. ಕಲಿಯುವವರಿಗೆ ಹೊಸ ಪಾಠ ಕಲಿಯುತ್ತಿದ್ದೇವೆ, ಅಭಿವೃದ್ಧಿ ಹೊಂದುತ್ತಿದ್ದೇವೆ ಎಂಬ ಧೈರ್ಯ, ಉತ್ಸಾಹ ಸ್ವಲ್ಪವೂ ಕಡಿಮೆಯಾಗಕೂಡದು.

ಮೂರನೆಯ ಮೆಟ್ಟಿಲು-ಒತ್ತುಕಾಗುಣಿತಗಳು.—ಒಂದು ಪದದ ಒಂದು ಅಕ್ಷರವನ್ನು ಸಾಮಾನ್ಯವಾಗಿ ಹೇಳಿದಾಗ ಆಗುವ ಅರ್ಥಕ್ಕೂ, ಅದನ್ನೇ ಒತ್ತಿ ಹೇಳಿದಾಗ ಆಗುವ ಪದದ ಅರ್ಥಕ್ಕೂ ಇರುವ ವ್ಯತ್ಯಾಸವನ್ನು ಜ್ಞಾಪಿಸಬೇಕು. “**ಬೆಣೆ**” “**ಬೆಣ್ಣೆ**” “**ಅಜ**” “**ಅಜ್ಜ**” ಇವುಗಳ ಅರ್ಥವನ್ನು ವಿವರಿಸಿ ಒಂದನ್ನು ಬರೆಯುವುದಕ್ಕೆ ಬದಲು ಇನ್ನೊಂದನ್ನು ಬರೆಯುವುದು ಎಂಥ ಆಭಾಸಕ್ಕೆ ಅವಕಾಶ ಕೊಡುತ್ತದೆಂದು ತಿಳಿಸಬೇಕು. “ರೂಪಾಯಿಗೆ ಎಷ್ಟು ಸೇರು ಬೆಣೆ” ಎಂದು ಪ್ರಶ್ನಿಸುವವನು ಎಷ್ಟು ನಗೆಪಾಟಲನಾಗುತ್ತಾನೆ ಎಂದು ಹೇಳಬೇಕಾಗಿಲ್ಲ. “ನಿಮ್ಮ ಅಜನಿಗೆ ಎಷ್ಟು ವಯಸ್ಸು?” ಎಂಬ ಪ್ರಶ್ನೆಯೂ ಇದೇ ರೀತಿ ಹಾಸ್ಯದ್ಯೋತಕವಾದದ್ದು. ಒಂದು ಅಕ್ಷರವನ್ನು ಒತ್ತಿ ಉಚ್ಚರಿಸುತ್ತೇವೆ ಎಂದು ಸೂಚಿಸಲು ಅದೇ ಅಕ್ಷರವನ್ನು ಮೂಲಾಕ್ಷರದ ಕೆಳಗಡೆ ಬರೆದು ಸೂಚಿಸಬಹುದು. “**ಅಜ್ಜ**”, “**ಬೆಣ್ಣೆ**” ಎನ್ನುವುದನ್ನು ಕಪ್ಪು ಹಲಗೆಯ ಮೇಲೆ ಬರೆದು ಸ್ಪಷ್ಟಪಡಿಸಿ. ಒತ್ತಿ ಹೇಳುವಾಗ ಮಾತ್ರ ಈ ಅಕ್ಷರಗಳ ಕೆಳಗಡೆ ಒತ್ತುಗಳನ್ನು ಬರೆಯಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ತಿಳಿಸಿ. ಈಗ ಪಾಠವನ್ನು ಓದಿಸಿ ಬರೆಸಿ ಕಲಿಸಬಹುದು. ಮೂಲಾಕ್ಷರಗಳ ರೂಪಗಳೇ ಒತ್ತುಗಳಾದ **ಬ, ಜ, ಣ** ಮೊದಲು ಬರುತ್ತವೆ. ಮೂಲಾಕ್ಷರಗಳನ್ನು ಸುಮಾರಾಗಿ ಹೋಲುವ ಒತ್ತುಗಳ ಪಾಠಗಳು ಅನಂತರ ಬರುತ್ತವೆ. ಕೊನೆಯಲ್ಲಿ ಅಕ್ಷರ

ಗಳಿಗೂ ಒತ್ತುಗಳಿಗೂ ಯಾವ ಹೋಲಿಕೆಯೂ ಇಲ್ಲದ ಒತ್ತುಗಳನ್ನು ವಿವರಿಸಲಾಗಿದೆ. ಮೊದಲು **ಸಜಾತೀಯ** ಒತ್ತುಗಳನ್ನೂ, ಅನಂತರ **ವಿಜಾತೀಯ** ಒತ್ತುಗಳನ್ನೂ ವಿವರಿಸುವ ಕ್ರಮವನ್ನು ಸಾಮಾನ್ಯವಾಗಿ ಅನುಸರಿಸಿದೆ.

ಈ ಪಾಠಗಳಲ್ಲಿಯೂ ಒಂದು ಕಥೆಯನ್ನೋ ವಿಷಯವನ್ನೋ ವಸ್ತುವಾಗಿ ಆರಿಸಿಕೊಂಡಿದೆ. ಸ್ಥಳಾವಕಾಶವಿಲ್ಲದೆ ವಿಷಯವನ್ನು ಬಹು ಸ್ಥೂಲವಾಗಿಮಾತ್ರ ಬರೆಯಲು ಸಾಧ್ಯವಾಗಿದೆ. ಆದರೂ ಉಪಾಧ್ಯಾಯರು ಆ ವಿಷಯವಾಗಿ ಚೆನ್ನಾಗಿ ಚರ್ಚಿಸಿ ತಿಳಿಸಿ, ಕಲಿಯುವವರ ತಿಳಿವಳಿಕೆಯನ್ನು ಹೆಚ್ಚಿಸಬೇಕು. ಒಂದು ವಾಕ್ಯವನ್ನು ಓದಿದನಂತರ ಅದರ ಅರ್ಥವು ವಿದ್ಯಾರ್ಥಿಗೆ ತಿಳಿದಿದೆಯೋ ಇಲ್ಲವೇ ಎಂಬುದನ್ನು ನಿರ್ಧರಮಾಡಿಕೊಳ್ಳಬೇಕು. ಓದಿದ ವಾಕ್ಯದ ಅರ್ಥದ ಕಡೆ ಅವನ ದೃಷ್ಟಿಯು ಸ್ವಾಭಾವಿಕವಾಗಿ ಹೋಗುವಂತೆ ರೂಢಿ ಮಾಡಿಸಬೇಕು.

ನಾಲ್ಕನೆಯ ಮೆಟ್ಟಲು-ಕ್ಲಿಷ್ಟವಾದ ಅಕ್ಷರಗಳು.—ಒತ್ತಕ್ಷರಗಳಾದನಂತರ ಮಹಾಪ್ರಾಣಗಳನ್ನೂ, ವರ್ಣಮಾಲೆಯಲ್ಲಿ ಉಳಿದಿರತಕ್ಕ **ಶ, ಷ,** ಮೊದಲಾದುವನ್ನೂ ತೆಗೆದುಕೊಳ್ಳಲಾಗಿದೆ. ಮಹಾಪ್ರಾಣಗಳುಳ್ಳ ಮಾತುಗಳು ಸಾಮಾನ್ಯವಾಗಿ ಸಂಸ್ಕೃತದಿಂದ ಬಂದವು. ಹಳ್ಳಿಗರ ಮಾತಿನಲ್ಲಿ ಇವು ಬಹಳ ಕಡಿಮೆ; ಇವುಗಳನ್ನು ಉಚ್ಚರಿಸುವುದು ಅವರಿಗೆ ಕಷ್ಟ. ಅಲ್ಪಪ್ರಾಣಕ್ಕೆ ಬದಲು ಮಹಾಪ್ರಾಣವನ್ನೂ, ಮಹಾಪ್ರಾಣಕ್ಕೆ ಬದಲು ಅಲ್ಪಪ್ರಾಣವನ್ನೂ ಕೆಲವು ವೇಳೆ ಹೇಳುತ್ತಾರೆ. ಬರವಣಿಗೆಯಲ್ಲಿ ಇಂಥ ವಿಶೇಷ ತಪ್ಪುಗಳಿರುತ್ತವೆ. ಒತ್ತಕ್ಷರಗಳಿಗೂ, ಮಹಾಪ್ರಾಣಗಳಿಗೂ ಸಂದೇಹ ವುಂಟಾಗುವುದು ಅವರಿಗೆ ಸ್ವಾಭಾವಿಕ. **ಮೂರ್ಖ** ಎನ್ನುವ ಮಾತನ್ನು ಅನೇಕರು **ಮೂರ್ಕ** ಎಂದು ಉಚ್ಚರಿಸುತ್ತಾರೆ; **ಮೂರ್ಕ್ಖ** ಎಂದು ಬರೆಯುತ್ತಾರೆ. ಈ ಭಾಗದಲ್ಲಿ ಬರುವ ಮಹಾಪ್ರಾಣ ಮತ್ತು ಇತರ ಅಕ್ಷರಗಳ ಖಚಿತ ಜ್ಞಾನವುಂಟಾಗಲು ಬಹಳಕಾಲ ಮತ್ತು ಅಭ್ಯಾಸ ಬೇಕು. ಇದನ್ನು ಕಲಿಸುವಾಗ ಉಪಾಧ್ಯಾಯರು ಹೆಚ್ಚು ತಾಳ್ಮೆಯನ್ನೂ ಸಹಾನುಭೂತಿಯನ್ನೂ ತೋರಿಸುವುದು ಆವಶ್ಯಕ. ಇದರಲ್ಲಿ ಕಂಡುಬರುವ ಮಾತುಗಳನ್ನು ಉಕ್ತಲೇಖನಕ್ಕೆ ಕೊಡಬೇಕಾಗಿಲ್ಲ. ಅವುಗಳನ್ನು ಸರಿಯಾಗಿ ಓದುವುದು, ನೋಡಿಕೊಂಡು ಬರೆಯುವುದು ಬಂದರೆ ಸಾಕು.

ಐದನೆಯ ಮೆಟ್ಟಲು-ಅಕ್ಷರತೆ ದೃಢಪಡುವುದಕ್ಕಾಗಿ.—ಮೇಲೆ ೇಳಿದ ನಾಲ್ಕು ಮೆಟ್ಟಲುಗಳೂ ನಮ್ಮ ಯೋಜನೆಯ ಮೊದಲನೆಯ ರ್ಜೆಗೆ ಎಂದರೆ ಮೊದಲು ಎರಡೂವರೆ ಅಥವಾ ಮೂರು ತಿಂಗಳಿಗೆ ನ್ವಯಿಸತಕ್ಕವು. ಎರಡನೆಯ ದರ್ಜೆಯು ಎಂದರೆ ನಮ್ಮ ಐದನೆಯ ುಟ್ಟಲು, ಓದುಗಾರಿಕೆ ಮತ್ತು ಬರವಣಿಗೆಯಲ್ಲಿ ಹೆಚ್ಚು ಪರಿಶ್ರಮ ಬರುವುದ ್ಕಾಗಿ. ಈಗ ಉಪಯೋಗಿಸಬೇಕಾದುದು ನಮ್ಮ "**ವಯಸ್ಕರ ಓದುವ ುಸ್ತಕ.**" ವಯಸ್ಕರಿಗೆ ಅತ್ಯಗತ್ಯವಾಗಿ ತಿಳಿಯಬೇಕಾದ ವಿಷಯಗಳನ್ನು ರಿಸಿಕೊಂಡು ಪಾಠಗಳನ್ನು ಬರೆಯಲಾಗಿದೆ. ಚರಿತ್ರೆ, ಭೂಗೋಳ, ಪೌರ ೀತಿ, ಶಾಸ್ತ್ರ, ಪುರಾಣ, ಧರ್ಮಬೋಧೆ, ಕಥೆ, ಕವನ—ಎಲ್ಲವೂ ಇಲ್ಲಿ ಕಾಣ ರುತ್ತವೆ. ಓದು ಬರಹದ ಜೊತೆಗೆ ವಿದ್ಯಾರ್ಥಿಗೆ ತನ್ನ ಸನ್ನಿವೇಶವನ್ನು ದಷ್ಟುಮಟ್ಟಿಗೆ ಪರಿಚಯ ಮಾಡಿಕೊಟ್ಟು ಅವನ ತಿಳಿವನ್ನು ಹೆಚ್ಚಿಸ ೀಕೆಂಬುದೂ ನಮ್ಮ ಯೋಜನೆಯ ಒಂದು ಮುಖ್ಯ ಉದ್ದೇಶ. ಇದು ತಿಳಿ ರೆ ಮುಂದೆ ಅವನಿಗೆ ಒಂದು ವೃತ್ತಪತ್ರಿಕೆಯನ್ನು ಓದಿಕೊಂಡು ತನ್ನ ಸುತ್ತ ುತ್ತಲ ಜೀವನದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಲು ಅವಕಾಶವಾಗುತ್ತದೆ. ಪುಸ್ತಕದಲ್ಲಿ ಕೊಟ್ಟಿರುವ ಕೆಲವು ವಿಷಯಗಳು ಹಳ್ಳಿಯ ಜೀವನಕ್ಕೆ ಅನ್ವ ುಸದಿರಬಹುದು. ಈ ಕಾರಣಗಳಿಂದ ಇವನ್ನು ಬಿಟ್ಟುಬಿಡಬಾರದು. ಪಾಠ ಾಡುವುದಕ್ಕೆ ಮುಂಚಿತವಾಗಿ ಅವನ್ನು ಓದಿಕೊಂಡು ವಿದ್ಯಾರ್ಥಿಗಳಿಗೆ ವುಗಳಲ್ಲಿ ಆದಷ್ಟು ಆಸಕ್ತಿ ಹುಟ್ಟುವಂತೆ ಬೋಧಿಸಬೇಕು. ಪ್ರತಿ ತರಗತಿ ುಲ್ಲಿಯೂ ಸಾಮಾನ್ಯವಾಗಿ ಒಬ್ಬಿಬ್ಬರು ಚೆನ್ನಾಗಿ ಹಾಡಬಲ್ಲರು; ಅಂಥವ ಂದ ಪದ್ಯಭಾಗವನ್ನು ಶ್ರಾವ್ಯವಾಗಿ ಓದಿಸಬೇಕು. ಓದುವುದು ಬಂದರೆ ಮ್ಮ ಭಜನೆಗೆ ಬೇಕಾದ ಇಂಥ ಹೊಸ ಹಾಡುಗಳನ್ನು ತಾವೇ ಓದಿ ಕಲಿಯ ಹುದೆಂದು ಅವರಿಗೆ ತಿಳಿಸಬೇಕು. ಈ ಪದ್ಯಗಳಲ್ಲಿ ಒಂದೊಂದು ಮಾತಿನ ರ್ಥವನ್ನೂ ವಿವರಿಸಲು ಪ್ರಯತ್ನಿಸದೆ ವಾಕ್ಯಗಳ ಮುಖ್ಯ ತಾತ್ಪರ್ಯ ನ್ನು ಮಟ್ಟಿಗೆ ತಿಳಿಸಬೇಕು. ಇದೇ ರೀತಿ ಗದ್ಯ ಪಾಠ ಮಾಡುವಾಗಲೂ ಂದೊಂದು ಹೊಸಮಾತಿನ ಅರ್ಥವನ್ನೂ ಹೇಳಬೇಕಾಗಿಲ್ಲ. ಅಂಥ ಕಠಿಣ ಮಾತುಗಳು ಕಂಡುಬರುವುದೂ ಇಲ್ಲ. ಒಟ್ಟಿನಲ್ಲಿ ವಾಕ್ಯದ ಅರ್ಥ, ಹೇಳಿರುವ ಷಯ, ತಿಳಿದರೆ ಸಾಕು.

“ ಬೆಳಕು ” ಎಂಬ ವಾರಪತ್ರಿಕೆಯನ್ನು ಅಕ್ಷರ ಕಲಿಯುತ್ತಿರುವ ವಯಸ್ಕರಿಗಾಗಿಯೇ ಪ್ರಕಟಿಸುತ್ತಿದೆ. ಪ್ರತಿ ಅಕ್ಷರಪರಿಚಯ ತರಗತಿಗೂ ಈ ಪತ್ರಿಕೆಯ ೧ ಪ್ರತಿಯನ್ನು ಕಳುಹಿಸುತ್ತೇವೆ. ಆ ಪತ್ರಿಕೆ ಶನಿವಾರ ಪ್ರಕಟವಾಗಿ ಎಲ್ಲ ಊರುಗಳಿಗೂ ಸೋಮವಾರದ ದಿನ ಬರುತ್ತದೆ. ಆ ದಿನ ಉಪಾಧ್ಯಾಯರು ಆ ಪತ್ರಿಕೆಯನ್ನು ತಾವು ನಿಧಾನವಾಗಿ ಓದಿ ಅಲ್ಲಿನ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಜೊತೆಗೆ ದಪ್ಪ ಅಕ್ಷರಗಳಲ್ಲಿರುವ ವಾಕ್ಯಗಳನ್ನು ವಿದ್ಯಾರ್ಥಿಗಳ ಕೈಯಲ್ಲೇ ಓದಿಸಬೇಕು. ಮುಖ್ಯವಾಗಿ ವೃತ್ತಪತ್ರಿಕೆ ಓದುವ ಅಭ್ಯಾಸ ಅವರಿಗೆ ಮಾಡಿಸಬೇಕು; ಅಲ್ಲದೆ ಅದರಲ್ಲಿ ಆಸಕ್ತಿ ಹುಟ್ಟಿಸಬೇಕು.

ಮುಂದೆ ಪುಸ್ತಕ ಓದುವ ತರಗತಿಯ ಪ್ರತಿ ವಿದ್ಯಾರ್ಥಿಗೂ ಒಂದೊಂದು ಪ್ರತಿಯಂತೆ ಕಳುಹಿಸಲಾಗುವುದು. ಆಗ ಪ್ರತಿ ವಿದ್ಯಾರ್ಥಿಯೂ ಪತ್ರಿಕೆಯನ್ನು ತಾನೇ ಸ್ವತಃ ಓದಿಕೊಳ್ಳಬೇಕು. ಉಪಾಧ್ಯಾಯರು ಅಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳಲು ಸಹಾಯಮಾಡಬೇಕು.

ಲೆಕ್ಕಾಚಾರ

ವಯಸ್ಕನ ನಿತ್ಯಗಟ್ಟಲೆಯ ಲೆಕ್ಕಾಚಾರಗಳಲ್ಲಿ ಸಂಭವಿಸುತ್ತಿರುವ ಮೋಸಗಳನ್ನು ಕಡಮೆ ಮಾಡುವುದು ಅಕ್ಷರ ಪ್ರಚಾರದ ಉದ್ದೇಶಗಳಲ್ಲಿ ಒಂದು. ಅವನಿಗೆ ಸಣ್ಣ ಸಂಖ್ಯೆಗಳನ್ನು ಎಂದರೆ—ಸಾವಿರದವರೆಗೂ ಬರೆಯುವುದನ್ನು ಕಲಿಸಬೇಕು. ಐದು ರೂಪಾಯಿ ಆರು ಆಣೆ ನಾಲ್ಕು ಪೈ ಎಂದು ಹೇಳಿದರೆ ಅದನ್ನು ಗುರುತಿಸುವ ಸಾಮರ್ಥ್ಯ ಅವನಿಗೆ ಬೇಕು. ಹೀಗೆಯೇ ಮೂರು ನಾಲ್ಕು ಮೊಬಲಗನ್ನು ಕೂಡುವುದು, ಒಂದು ಮೊಬಲಗಿನಿಂದ ಇನ್ನೊಂದನ್ನು ಕಳೆಯುವುದು, ಒಂದು ಮೊಬಲಗನ್ನು ನಾಲ್ಕೈದು ಜನರು ಸಮವಾಗಿ ಹಂಚಿಕೊಳ್ಳುವುದು, ದಿನಕ್ಕೆ ಆರಾಣೆ ಕೂಲಿಯಂತೆ ಒಂದು ತಿಂಗಳಿಗೆ ಬರಬೇಕಾದ ಒಟ್ಟು ಹಣ ಇವನ್ನೆಲ್ಲಾ ಅವನು ಅರಿತಿರಬೇಕು. ಇವು

ಗಳನ್ನು ಕಲಿಸುವುದು ಎರಡನೆಯ ದರ್ಜೆಯಲ್ಲಿ. ಮೊದಲನೆಯ ದರ್ಜೆಯಲ್ಲಿ ಸಾವಿರದವರೆಗೂ ಗುರುತಿಸುವುದು, ಒಂದರಿಂದ ಹತ್ತರವರೆಗಿನ ಮಗ್ಗಿ, ಹನ್ನೆರಡು ಹದಿನಾರರ ಮಗ್ಗಿ ಬಂದರೆ ಸಾಕು. ಸಂಖ್ಯೆಗಳನ್ನು ಹೇಳಿ ಗುರುತಿಸುವಂತೆ ತಿಳಿಸಿದೆ. ಐವತ್ತು ರೂಪಾಯಿ, ಅರವತ್ತು ಕುರಿ, ಮೂವತ್ತೈದು ಎಕರೆ, ಈ ರೀತಿ ವಸ್ತುಗಳನ್ನು ಹೇಳಿ ಅವುಗಳ ಸಂಖ್ಯೆಯನ್ನು ಬರಸಬೇಕು. ಯಾವ ಪ್ರಶ್ನೆಯನ್ನು ಹೇಳಿದರೂ ಬಿಡಿ ಅಂಕೆಗಳನ್ನೊಳಗೊಂಡಿರದೆ ಅವರಿಗೆ ಪರಿಚಿತವಾದ ವಸ್ತುಗಳಿಗೆ, ಅವರ ವ್ಯವಹಾರಕ್ಕೆ ಸಂಬಂಧಪಟ್ಟಂತಿರಬೇಕು. ಕಠಿನವಾದ ಗುಣಾಕಾರ, ಭಾಗಾಹಾರ ಅಥವಾ ತೊಡಕಾದ ಪ್ರಶ್ನೆಗಳನ್ನು ಕೊಟ್ಟು ಅವರಿಗೆ ಬೇಸರವುಂಟುಮಾಡಕೂಡದ. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಂಥವನ್ನು ಮಾಡುವ ಸಾಮರ್ಥ್ಯ ಅವರಿಗೆ ಬಂದರೆ ಸಾಕು.

೧. ಐದು ಪಲ್ಲ ರಾಗಿಯನ್ನು ಎಂಟು ಜನ ಹಂಚಿಕೊಂಡರೆ ಒಬ್ಬೊಬ್ಬರಿಗೆ ಎಷ್ಟು ಬರುತ್ತದೆ?

೨. ಮಾದ ಮದುವೆ ಜವಳಿ ತರುವುದಕ್ಕೆ ನೂರು ರೂಪಾಯಿ ತೆಗೆದುಕೊಂಡು ಹೋದ. ಸೀರೆಗೆ ೪೨ ರೂಪಾಯಿ, ರವಿಕೆಗೆ ೨ ರೂಪಾಯಿ ೮ ಆಣೆ, ತನ್ನ ಬಟ್ಟೆಗೆ ೭ ರೂಪಾಯಿ ಕೊಟ್ಟರೆ, ಎಷ್ಟು ಉಳಿಯುತ್ತದೆ?

೩. ಕಾಯಿಗೆ ಒಂದು ಕಾಸಿನಂತೆ ೨೫೦ ಕಾಯಿಗಳಿಗೆ ಎಷ್ಟು ಸುಂಕ ಕೊಡಬೇಕು?

೪. ಈರ ಗಜಕ್ಕೆ ಆರಾಣೆಯಂತೆ ಏಳೂವರೆ ಗಜ ಬಟ್ಟೆ ತೆಗೆದುಕೊಂಡು ೧೦ ರೂಪಾಯಿ ನೋಟು ಕೊಟ್ಟ. ಅವನಿಗೆ ಬಾಕಿ ಚಿಲ್ಲರೆ ಎಷ್ಟು ಬರಬೇಕು?

೫. ಎಕರೆಗೆ ೬ ರೂಪಾಯಿ ೮ ಆಣೆಯಂತೆ ನಾಲ್ಕೂವರೆ ಎಕರೆಗೆ ಕಂದಾಯ ಎಷ್ಟು ಕಟ್ಟಬೇಕು? ೩ ಎಕರೆ ೩೦ ಗುಂಟೆಗೆ ಎಷ್ಟು ಕಟ್ಟಬೇಕು?

೬. ಮಣಕ್ಕೆ ನಾಲ್ಕು ರೂಪಾಯಿನಂತೆ, ಎರಡಾಣೆಗೆ ಎಷ್ಟು ಮೆಣಸಿನಕಾಯಿ ಬರುತ್ತದೆ?

೭. ರೂಪಾಯಿಗೆ ತಿಂಗಳಿಗೆ ಮೂರುಕಾಸು ಬಡ್ಡಿ ಆದರೆ ಐವತ್ತು ರೂಪಾಯಿಗೆ ಆರು ತಿಂಗಳಿಗೆ ಎಷ್ಟು ಬಡ್ಡಿ ಕೊಡಬೇಕು ?

ಇಂಥ ಪ್ರಶ್ನೆಗಳನ್ನು ಮಾಡಲು ಆಗತ್ಯವಾದ ತೂಕ, ಅಳ ಮುಂತಾದ ಮಾನಗಳನ್ನು ಅವರಿಗೆ ಪರಿಚಯ ಮಾಡಿಕೊಡಬೇಕು. ಅಕ್ಷ ಪರಿಚಯ ತರಗತಿಯಲ್ಲಿ ೧ ರಿಂದ ೧೦೦ರ ವರೆಗೆ ಬರೆಯುವುದಕ್ಕೆ ಕಲಿ ಕೊಟ್ಟರೆ ಸಾಕು. ಮುಂದಿನ ತರಗತಿಯಲ್ಲಿ ವಾರಕ್ಕೆ ೨-೩ ದಿನಗಳನ್ನು ಲೆಕ್ಕಾಚಾರ ಹೇಳಿಕೊಡುವುದಕ್ಕೆ ವಿನಾಸಲಾಗಿಡಬೇಕು. ವಯಸ್ಕರಿಗೆ ಲೆಕ್ಕಾಚಾರಗಳನ್ನು ಕಲಿಯುವುದರಲ್ಲಿ ಕುತೂಹಲ ಹೆಚ್ಚು. ಕೆಲವರು ಬಹಳ ಮುಂದಾಗಿಯೂ ಇರುತ್ತಾರೆ. ಅವರಿಗೆ ಉತ್ಸಾಹ ಹುಟ್ಟಿಸುವ ರೀತಿ ಯಲ್ಲಿ ಬೋಧಿಸುವುದು ನಮ್ಮ ಕರ್ತವ್ಯ.

ವಿದ್ಯಾಮಂದಿರ

ವಯಸ್ಕರಿಗೆ ಓದುಬರಹವನ್ನು ಕಲಿಸಿದಮಾತ್ರಕ್ಕೆ ನಮ್ಮ ಕೆಲಸವು ಮುಗಿದಂತಾಗುವುದಿಲ್ಲ. ಕಲಿತ ಓದುಬರಹವನ್ನು ಉಪಯೋಗಿಸುವ ಆವಶ್ಯ ಕತೆಯೂ ಅನುಕೂಲವೂ ಇಲ್ಲದೆ ಹೋದರೆ ಅಕ್ಷರ ಕಲಿಸುವುದಕ್ಕೆ ತೆಗೆದು ಕೊಂಡ ತೊಂದರೆ, ಅದಕ್ಕೆ ಆದ ಖರ್ಚು ಎಲ್ಲವೂ ವ್ಯರ್ಥವಾಗುತ್ತವೆ. ಅಕ್ಷರಗಳನ್ನು ಕಲಿಸುವುದು ಮಾತ್ರವೇ ನಮ್ಮ ಧ್ಯೇಯವಲ್ಲ. ಕಲಿತ ವಿದ್ಯೆ ಜನರಲ್ಲಿ ಆತ್ಮಗೌರವವನ್ನು ಹುಟ್ಟಿಸಿ, ತಮ್ಮ ಬದುಕನ್ನು ಹಸನಾಗಿ ಮಾಡಿ ಕೊಳ್ಳಲು ಸಹಾಯವಾಗಿ, ದೇಶದ ಆಡಳಿತದಲ್ಲಿ ಬುದ್ಧಿವಂತಿಕೆಯಿಂದ ಭಾಗ ವಹಿಸಲು ಸಹಾಯವಾಗಬೇಕು. ಅವರು ತಮ್ಮ ಓದಿನಿಂದ ನಡೆನುಡಿಗಳನ್ನು ತಿದ್ದಿಕೊಂಡು, ತಮ್ಮ ಊರು ಹಳ್ಳಿಗಳ ಆರೋಗ್ಯ ಐಶ್ವರ್ಯಗಳನ್ನು ಹೆಚ್ಚಿ ಸುವುದರಲ್ಲಿಯೂ, ತಮ್ಮ ಜೀವನ ಮಾರ್ಗವನ್ನು ಉತ್ತಮಪಡಿಸಿಕೊಳ್ಳುವು ದರಲ್ಲಿಯೂ ನಿರತರಾಗುವಂತಾಗಬೇಕು. ಆದುದರಿಂದ ಐದು ತಿಂಗಳಲ್ಲಿ ನಾವು ಕಲಿಸಿಕೊಟ್ಟ ಓದಿನಿಂದ ಉಂಟಾದ ಉತ್ಸಾಹವನ್ನು ಮುಂದುವರಿಸಿ

ವರಿಗೆ ಹೆಚ್ಚಿನ ತಿಳಿವಳಿಕೆಯನ್ನು ಕೊಡುವ ಉದ್ದೇಶದಿಂದ "**ವಯಸ್ಕರ ಕ್ಷಣದ ಪುಸ್ತಕಮಾಲೆ**" ಎಂಬ ಹೆಸರಿನ ಪುಸ್ತಕಗಳನ್ನು ಪ್ರಕಟಿಸಿದೆ.

ಈ ಪುಸ್ತಕಮಾಲೆಯ ಪ್ರಕಟಣೆಗಳನ್ನು ಉಚಿತವಾಗಿ ಪ್ರತಿ ಅಕ್ಷರ ್ರಚಾರ ಕೇಂದ್ರಕ್ಕೂ ಒದಗಿಸುತ್ತದೆ. ಅಕ್ಷರ ಕಲಿತವರು ಒಂದು ಸಂಘ ನ್ನು ಮಾಡಿಕೊಂಡು ತಮ್ಮೊಳಗೇ ಒಬ್ಬ ಮುಂದಾಳುವನ್ನು ಗೊತ್ತುಮಾಡಿ ೊಂಡರೆ ಅವರ ವಶಕ್ಕೆ ಈ ಪುಸ್ತಕಗಳನ್ನು ಕೊಡಲಾಗುತ್ತದೆ. ಮುಖಂ ರು ತರಗತಿಯ ಉಪಾಧ್ಯಾಯರಾಗಿರಬಹುದು. ಇಲ್ಲವೆ, ವಿದ್ಯಾರ್ಥಿಗಳಲ್ಲೇ ಬ್ಬರಾಗಿರಬಹುದು. ಅವರು ತಮ್ಮ ಸಂಘಕ್ಕೆ ಜನಪ್ರಿಯವಾದ ಒಂದು ೆಸರನ್ನಿಟ್ಟು, ವಯಸ್ಕರ ತರಗತಿಯ ಎಲ್ಲ ವಿದ್ಯಾರ್ಥಿಗಳನ್ನೂ ಸದಸ್ಯ ನ್ನಾಗಿ ಸೇರಿಸಬೇಕು. ಇಂಥ ಸಂಘವನ್ನು '**ವಿದ್ಯಾಮಂದಿರ**' ಎಂದು ರೆಯಬಹುದು ಎಂದು ನಮ್ಮ ಸಲಹೆ.

ವಯಃಸ್ಕರ ಶಿಕ್ಷಣಮಾಲೆಯಲ್ಲಿ ಷುರುವಾಗಿರುವ ಎಲ್ಲ ಪುಸ್ತಕಗಳನ್ನೂ ದಸ್ಯರು ಓದುವಂತೆ ಪ್ರೋತ್ಸಾಹಿಸಬೇಕು. ಕನಿಷ್ಟ ಪಕ್ಷ ಪ್ರತಿಯೊಬ್ಬರೂ ತ್ತು ಪುಸ್ತಕಗಳನ್ನಾದರೂ ಓದುವಂತೆ ಆಗಬೇಕು. ಇದಕ್ಕೆ ಕಾಲ ಮೂರು ತಿಂಗಳು. ಈ ಕಾಲದಲ್ಲಿ '**ಬೆಳಕು**' ಪತ್ರಿಕೆಯನ್ನು ಸದಸ್ಯರು ದುವುದಕ್ಕೆ ಪ್ರತಿಯೊಬ್ಬರಿಗೂ ಒಂದು ಪ್ರತಿಯಂತೆ ಕಳುಹಿಸಿಕೊಡುತ್ತದೆ.

ಅಲ್ಲದೆ ದೊಡ್ಡ ದೊಡ್ಡ ಗ್ರಾಮಗಳಲ್ಲಿ ಗ್ರಾಮಾಂತರ ಪುಸ್ತಕ ಭಂಡಾರ ುತ್ತು ವಾಚನಾಲಯಗಳನ್ನು ಏರ್ಪಡಿಸುತ್ತದೆ. ಜೊತೆಗೆ ಜ್ಞಾನಪ್ರಸಾರ ಮಾಡಲು ವಿಶೇಷ ಕಾರ್ಯಕ್ರಮವನ್ನು ಕೈಕೊಳ್ಳಲು ಒಂದು ಯೋಜನೆ ುನ್ನು ತಯಾರು ಮಾಡಿದೆ. ಇವುಗಳ ವಿವರವನ್ನು ಪ್ರತ್ಯೇಕವಾಗಿ ೇರೆಯೊಂದು ಪುಸ್ತಕದಲ್ಲಿ ಕೊಟ್ಟಿದೆ.

ಹುರಾಮರ್ಶಿಣಾನಿ

ಈ ತರಗತಿಗಳಲ್ಲಿ ಶಿಕ್ಷಣ ಹೊಂದಿದ ಅಕ್ಷರಸ್ಥನ ಯೋಗ್ಯತೆಯನ್ನು ಪರೀಕ್ಷಿಸುವ ರೀತಿ

ಎರಡೂವರೆ ತಿಂಗಳಿನ ಶಿಕ್ಷಣವಾದ ಮೇಲೆ ಮೊದಲನೆಯ ಪರೀಕ್ಷೆಯ ಕ್ರಮ ಕೆಳಗೆ ಕಂಡಂತೆ ಇದೆ.

ಒಟ್ಟು ನಂಬರು ೧೦೦

೧.	ಪರಿಚಯವಾದ ಪಾಠವನ್ನು ಓದುವುದು	೨೦
೨.	ಆ ವಿಷಯ ಗ್ರಹಣ	೧೦
೩.	ದಪ್ಪ ಅಕ್ಷರದಲ್ಲಿ ಅಚ್ಚಾದ ಒಂದು ಪ್ರಕಟನೆ ಇಲ್ಲವೆ ವೃತ್ತಪತ್ರಿಕೆಯಲ್ಲಿ ದಪ್ಪಕ್ಷರಗಳಲ್ಲಿ ಬರೆದ ಲೇಖನಗಳನ್ನು ಓದುವುದು	೨೦
೪.	ಆ ವಿಷಯ ಗ್ರಹಣ	೧೦
೫.	ಪಾಠವನ್ನು ನೋಡಿಕೊಂಡು ಬರೆಯುವುದು	೧೫
೬.	ಉಕ್ತಲೇಖನ	೧೫
೭.	ತರಗತಿಗೆ ಕ್ರಮವಾಗಿ ಹಾಜರಿ	೧೦

ತೇರ್ಗಡೆಯ ಮಟ್ಟ ಶೇ. ೪೦

ಎರಡನೆಯ ಪರೀಕ್ಷೆಯ ಕ್ರಮ : ಒಟ್ಟು ನಂಬರು ೧೦೦

೧.	ಪರಿಚಯವಾದ ಪಾಠವನ್ನು ಓದುವುದು	೨೦
೨.	ಆ ವಿಷಯ ಗ್ರಹಣ	೧೦
೩.	ವೃತ್ತಪತ್ರಿಕೆಯನ್ನು ಓದುವುದು	೨೦
೪.	ಆ ವಿಷಯ ಗ್ರಹಣ	೧೦
೫.	ಉಕ್ತಲೇಖನ	೧೫
೬.	ಸುಲಭ ಲೆಕ್ಕಾಚಾರ	೧೫
೭.	ತರಗತಿಗಳಿಗೆ ಕ್ರಮವಾದ ಹಾಜರಿ	೧೦

ತೇರ್ಗಡೆಯ ಮಟ್ಟ ಶೇ. ೪೦